# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:31.07.2023

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ: 08192-208029, ಫ್ಯಾಕ್ಸ್ ಸಂಖ್ಯೆ: 08192-208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಮ್ :

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/41(ಎ)/2023-24/1482** **ದಿನಾಂಕ:02.08.2023**

**ಇವರಿಗೆ,**

**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:31.07.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:31.07.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ-III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007.

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ-577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ-577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ-577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ-577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:31.07.2023ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಡಾ. ವಿಷ್ಣುಮೂರ್ತಿ ಕೆ.ಎ, ಜಂಟಿ ನಿರ್ದೇಶಕರು : ಸದಸ್ಯರು
3. ಕುಮಾರಿ ಗೀತಾ ಜಿ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಶ್ರೀಮತಿ ಶಾರದಾ ಪಾಟೀಲ್, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
5. ಪ್ರೊ. ರಾಮಲಿಂಗಪ್ಪ, ಡೀನರು, ವಿಜ್ಞಾನ ನಿಕಾಯ : ಸದಸ್ಯರು
6. ಪ್ರೊ. ಮಹಾಬಲೇಶ್ವರ್ ಯು.ಎಸ್., ಪ್ರಾಧ್ಯಾಪಕರು : ಸದಸ್ಯರು
7. ಡಾ. ರವಿ ಟಿ.ಎಸ್., ಪ್ರಾಚಾರ್ಯರು : ಸದಸ್ಯರು
8. ಡಾ. ನಾಗರಾಜ ಜಿ.ಯು., ಪ್ರಾಚಾರ್ಯರು : ಸದಸ್ಯರು
9. ಡಾ. ದಾಸಯ್ಯ ಜಿ., ಪ್ರಾಚಾರ್ಯರು : ಸದಸ್ಯರು
10. ಡಾ. ಪ್ರೇಮಾ ಪಿ.ಎಂ., ಪ್ರಾಚಾರ್ಯರು : ಸದಸ್ಯರು
11. ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
12. ಪ್ರೊ. ಸರೋಜ ಬಿ.ಬಿ., ಕುಲಸಚಿವರು. : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 12 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ, ನೂತನವಾಗಿ ಆಗಮಿಸಿದ ಡಾ.ವಿಷ್ಣುಮೂರ್ತಿ ಕೆ.ಎ., ಜಂಟಿ ನಿರ್ದೇಶಕರು ಹಾಗೂ ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತಗೊಂಡ ಶ್ರೀಮತಿ ಶಾರದಾ ಪಾಟೀಲ್, ಧಾರವಾಡ ಇವರನ್ನು ಅಭಿನಂದಿಸಿ ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(07/23) |

## –:ಟಿಪ್ಪಣಿ:–

**ವಿಷಯಃ ದಿನಾಂಕ:17.06.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:17.06.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಬಂದಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:17.06.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(b)/(07/23) |

## –:ಟಿಪ್ಪಣಿ:–

**ವಿಷಯ:** **ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಭೆಗೆ ರಾಜ್ಯದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ನಿಂದ ಓರ್ವ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು.**

**ಉಲ್ಲೇಖ:** ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರ ಪತ್ರಸಂಖ್ಯೆ: ಸಂ.ಸಾಗ್ರಇ/ ನಿಕ/ ಬಿ2/ 06/ 2021-22/ 1392 ದಿನಾಂಕ:22.06.2023.

*****

ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಭೆಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರುಗಳಿಂದ ಚುನಾಯಿಸಿದ ಒಬ್ಬ ಸದಸ್ಯರನ್ನು ಆಯ್ಕೆ ಮಾಡಿ ಸದರಿಯವರ ಅಂಚೆ ವಿಳಾಸ, ಇ-ಮೇಲ್ ಹಾಗೂ ಮೊಬೈಲ್ ಸಂಖ್ಯೆಯನ್ನು ಜರೂರಾಗಿ ಕಳುಹಿಸುವಂತೆ ಉಲ್ಲೇಖಿತ ಪತ್ರದಲ್ಲಿ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ತಿಳಿಸಿರುತ್ತಾರೆ.

ಆದ್ದರಿಂದ, ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನಿಂದ ಚುನಾಯಿತರಾದ ಒಬ್ಬ ಸದಸ್ಯರನ್ನು ಆಯ್ಕೆಮಾಡಿ ಹಾಗೂ ಅವರ ವಿಳಾಸ, ಇ-ಮೇಲ್ ಹಾಗೂ ಮೊಬೈಲ್ ಸಂಖ್ಯೆಯ ಮಾಹಿತಿಯನ್ನು ನಿರ್ದೇಶಕರವರ ಕಛೇರಿಗೆ ಕಳುಹಿಸಲು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಶ್ರೀಮತಿ ಶಾರದಾ ಪಾಟೀಲ್, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು - ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಭೆಗೆ ಸದಸ್ಯರನ್ನಾಗಿ ನಾಮನಿರ್ದೇಶಿಸಿ, ಸದರಿಯವರ ಇ-ಮೇಲ್ ಹಾಗೂ ಅಂಚೆ ವಿಳಾಸವನ್ನು ನಿರ್ದೇಶಕರ ಕಛೇರಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(c)/(07/23) |

**–:ಟಿಪ್ಪಣಿ:–**

**ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 5 (1) (2) ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಪ್ರಥಮ ಮೇಲ್ಮನವಿ ಅಧಿಕಾರಿಯನ್ನು ನೇಮಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಕಛೇರಿಗಳು, ವಿವಿಧ ವಿಭಾಗಗಳು, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಕೋರಿ ಸಲ್ಲಿಸುವ ಆರ್.ಟಿ.ಐ. ಅರ್ಜಿಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ನಿಗಧಿತ ಅವಧಿಯೊಳಗೆ ಒದಗಿಸಲು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 5 (1) (2) ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ಹಾಗೂ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ ಸೆಕ್ಷನ್ 19 (1) ರನ್ವಯ ಪ್ರಥಮ ಮೇಲ್ಮನವಿ ಅಧಿಕಾರಿಗಳನ್ನು ನೇಮಿಸಬಹುದಾಗಿರುತ್ತದೆ. ಅದರಂತೆ, ಅನುಬಂಧ-1 ರಲ್ಲಿ ವಿಭಾಗಗಳಿಗೆ ಅನುಗುಣವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಿಸಲಾಗಿದೆ (ಪ್ರತಿ ಲಗತ್ತಿಸಿದೆ).

ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**<u>ನಿರ್ಣಯ</u>**

ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 5 (1) (2) ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ವಿಭಾಗಗಳಿಗೆ ಅನುಗುಣವಾಗಿ ನೇಮಿಸಿರುವುದನ್ನು ಹಾಗೂ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ ಸೆಕ್ಷನ್ 19 (1) ರನ್ವಯ ಪ್ರಥಮ ಮೇಲ್ಮನವಿ ಅಧಿಕಾರಿಯನ್ನು ನೇಮಿಸಿರುವುದನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.01(d)/(07/23) |

## –ಃಟಿಪ್ಪಣಿಃ–

**ವಿಷಯಃ ಸರ್ವಜ್ಞ ಅಧ್ಯಯನ ಕೇಂದ್ರದ ಸಲಹಾ ಸಮಿತಿಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*****

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:12.07.2023 ರಂದು ಏರ್ಪಡಿಸಲಾಗಿದ್ದ ಸರ್ವಜ್ಞ ಅಧ್ಯಯನ ಕೇಂದ್ರದ ಸಲಹಾ ಸಮಿತಿಯಲ್ಲಿ ಕ್ರಿಯಾ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:12.07.2023 ರಂದು ಏರ್ಪಡಿಸಲಾಗಿದ್ದ ಸರ್ವಜ್ಞ ಅಧ್ಯಯನ ಕೇಂದ್ರದ ಸಲಹಾ ಸಮಿತಿಯಲ್ಲಿ ಕ್ರಿಯಾ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(07/23) |

## –:ಟಿಪ್ಪಣಿ:–

**ವಿಷಯ:** **ಯು.ಜಿ.ಸಿ. ಸಿ.ಎ.ಎಸ್. ಯೋಜನೆಯಡಿ ಡಾ. ಸುಚಿತ್ರ ಎಸ್. – ಇವರ ಪ್ರಾಧ್ಯಾಪಕ ಹುದ್ದೆಗೆ ನಿಗದಿಪಡಿಸಿರುವ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವ ಕುರಿತು.**

**ಉಲ್ಲೇಖ:**
1. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆ:ದಾವಿವಿ/ಮಾಸನಿ/333-1/2022-23/354, ದಿನಾಂಕ: 28.03.2022.
2. ಡಾ. ಸುಚಿತ್ರ ಎಸ್, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ – ಇವರ ಮನವಿ ದಿನಾಂಕ: 16.01.2023.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 05.06.2023.

*****

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಡಾ. ಸುಚಿತ್ರ ಎಸ್, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ಯು.ಜಿ.ಸಿ. ಸಿ.ಎ.ಎಸ್. ಯೋಜನೆಯಡಿ ದಿನಾಂಕ: 07.12.2021ರ ಅರ್ಹತಾ ದಿನಾಂಕದಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ನೀಡಲಾಗಿತ್ತು.

ಮುಂದುವರೆದು, ಡಾ. ಸುಚಿತ್ರ ಎಸ್, ಪ್ರಾಧ್ಯಾಪಕರು ಇವರಿಗೆ ದಿನಾಂಕ:07.12.2018 ರಂದು ಪಿ.ಹೆಚ್.ಡಿ. ಪ್ರಧಾನಿಸಿರುವುದರಿಂದ ತಮಗೆ ಪ್ರಾಧ್ಯಾಪಕರ ಹುದ್ದೆಗೆ ನಿಗದಿಪಡಿಸಿರುವ ಅರ್ಹತಾ ದಿನಾಂಕ:07.12.2021ರ ಬದಲಾಗಿ ದಿನಾಂಕ:07.12.2018 ಎಂದು ಪರಿಗಣಿಸುವಂತೆ ಉಲ್ಲೇಖ (2)ರ ಪತ್ರದಲ್ಲಿ ಕೋರಿರುತ್ತಾರೆ. ಈ ಕುರಿತು ಉಲ್ಲೇಖ (3)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವ ಬಗ್ಗೆ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ಡಾ. ಸುಚಿತ್ರ ಎಸ್, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರ – ಪ್ರಾಧ್ಯಾಪಕ ಹುದ್ದೆಗೆ ನಿಗದಿಪಡಿಸಿರುವ ಅರ್ಹತಾ ದಿನಾಂಕವನ್ನು ಪರಿಷ್ಕರಿಸಲು 2 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚನೆ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು                                                                 ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(b)/(07/23) |

## –:ಟಿಪ್ಪಣಿ:–

**ವಿಷಯ: ಹೊರಗುತ್ತಿಗೆ ನೌಕರರಿಗೆ 2023–24ನೇ ಸಾಲಿನ ಏಪ್ರಿಲ್ ಮಾಹೆಯಿಂದ ವ್ಯತ್ಯಾಸದ ತುಟ್ಟಿಭತ್ಯೆಯೊಂದಿಗೆ ಕನಿಷ್ಠ ವೇತನ ನೀಡುವಂತೆ ಕೋರಿರುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.06.2023

*****

ವಿಶ್ವವಿದ್ಯಾನಿಲಯದಲ್ಲಿ ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವ ಸಿ & ಡಿ ಗ್ರೂಪ್ ನೌಕರರುಗಳಿಗೆ ಕಾರ್ಮಿಕ ಇಲಾಖೆಯ **ಅಧಿಸೂಚನೆ ಸಂಖ್ಯೆ: ಕೆಎಇ 18 ಎಲ್‌ಡಬ್ಲ್ಯೂಎ 2022, ದಿನಾಂಕ:28.07.2022**ರಲ್ಲಿ ಏಪ್ರಿಲ್–2023 ಮಾಹೆಯಿಂದ ತುಟ್ಟಿಭತ್ಯೆಯನ್ನು ಹೆಚ್ಚಿಸಿರುವುದರಿಂದ ವ್ಯತ್ಯಾಸದ ತುಟ್ಟಿಭತ್ಯೆ ರೂ.603.60/– ಗಳೊಂದಿಗೆ ಕನಿಷ್ಠ ವೇತನವನ್ನು ಜಾರಿಗೊಳಿಸುವಂತೆ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಏಪ್ರಿಲ್ – 2023ರ ಮಾಹೆಯಿಂದ **ರೂ.603.60/–ಗಳ** ವ್ಯತ್ಯಾಸದ ತುಟ್ಟಿಭತ್ಯೆಯೊಂದಿಗೆ ಕನಿಷ್ಠ ವೇತನ ಪಾವತಿಸುವ ಬಗ್ಗೆ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಹೊರಗುತ್ತಿಗೆ ನೌಕರರಿಗೆ 2023–24ನೇ ಸಾಲಿನ ಏಪ್ರಿಲ್ ಮಾಹೆಯಿಂದ ವ್ಯತ್ಯಾಸದ ತುಟ್ಟಿಭತ್ಯೆಯೊಂದಿಗೆ ಕನಿಷ್ಠ ವೇತನ ನೀಡುವ ಕುರಿತಾದ ವಿಷಯವನ್ನು ಸಭೆಯು ಮುಂದೂಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(c)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರು/ ಸಂಯೋನಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.**

*****

ಈ ಕೆಳಕಂಡ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ಎರಡು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ, ಸದರಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಜೇಷ್ಠತೆಯ ಮೇರೆಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಸಂಬಂಧ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರ.ಸಂ. | ಹೆಸರು | ವಿಭಾಗ | ಅವಧಿ |
|---|---|---|---|
| 1 | ಡಾ. ಸುಚಿತ್ರ. ಎಸ್, ಪ್ರಾಧ್ಯಾಪಕರು | ಅರ್ಥಶಾಸ್ತ್ರ ಅಧ್ಯಯನ ವಿಭಾಗ | 02.08.2021 ರಿಂದ 01.08.2023 |
| 2 | ಡಾ. ನಂದೀಶ್ವರಪ್ಪ ಬಿ.ಪಿ. ಸಹ ಪ್ರಾಧ್ಯಾಪಕರು | ರಸಾಯನಶಾಸ್ತ್ರ ಅಧ್ಯಯನ ವಿಭಾಗ | 22.08.2021 ರಿಂದ 21.08.2023 |
| 3 | ಡಾ. ಪ್ರಮೋದ್ ಎಸ್.ಎನ್. ಸಹ ಪ್ರಾಧ್ಯಾಪಕರು | ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ | 22.08.2021 ರಿಂದ 21.08.2023 |

### ನಿರ್ಣಯ

ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

| ಕ್ರ.ಸಂ. | ಹೆಸರು | ವಿಭಾಗ | ಅವಧಿ |
|---|---|---|---|
| 1 | ಡಾ. ಹುಚ್ಚೇಗೌಡ ಸಹ ಪ್ರಾಧ್ಯಾಪಕರು | ಅರ್ಥಶಾಸ್ತ್ರ ಅಧ್ಯಯನ ವಿಭಾಗ | 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ. |
| 2 | ಪ್ರೊ. ನಾಗಸ್ವರೂಪ ಹಚ್.ಪಿ ಪ್ರಾಧ್ಯಾಪಕರು | ರಸಾಯನಶಾಸ್ತ್ರ ಅಧ್ಯಯನ ವಿಭಾಗ | |
| 3 | ಡಾ. ಶರತ್ ಆರ್. ಸಹ ಪ್ರಾಧ್ಯಾಪಕರು | ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ | |

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(d)/(07/23) |

## –ಃಟಿಪ್ಪಣಿಃ–

**ವಿಷಯಃ ಪ್ರೊ. ರಂಗಪ್ಪ, ಪ್ರಾಧ್ಯಾಪಕರು ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರನ್ನಾಗಿ ಮುಂದುವರಿಸಿರುವ ಕುರಿತು.**

ಉಲ್ಲೇಖಃ
1. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/204/ 2020-21/4172, ದಿನಾಂಕಃ 17.12.2020
2. ಪ್ರೊ॥ ಕೆ.ಬಿ. ರಂಗಪ್ಪ, ಪ್ರಾಧ್ಯಾಪಕರು – ಇವರ ಮನವಿ ದಿನಾಂಕಃ 27.06.2023
3. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/ 204/2023-24/ 1201, ದಿನಾಂಕಃ 15.07.2023.

*********

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಡಾ. ಕೆ.ಬಿ. ರಂಗಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ ಇವರನ್ನು ದಿನಾಂಕಃ18.12.2020 ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗದ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿತ್ತು.

ಮುಂದುವರೆದು, ಉಲ್ಲೇಖ (2)ರಲ್ಲಿ ಡಾ. ಕೆ. ಬಿ. ರಂಗಪ್ಪ, ಪ್ರಾಧ್ಯಾಪಕರು ಇವರು ಸದರಿ ನಿರ್ದೇಶಕರ ಹುದ್ದೆಯಿಂದ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಈ ಕುರಿತು ಮಾನ್ಯ ಕುಲಪತಿಗಳ ಆದೇಶಾನುಸಾರ ಡಾ. ಕೆ.ಬಿ. ರಂಗಪ್ಪ, ಪ್ರಾಧ್ಯಾಪಕರು – ಇವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗದ ನಿರ್ದೇಶಕರನ್ನಾಗಿ ಉಲ್ಲೇಖ (3)ರಲ್ಲಿ ಮುಂದುವರೆಸಿರುವ ಬಗ್ಗೆ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

## <u>ನಿರ್ಣಯ</u>

ಡಾ. ಕೆ.ಬಿ. ರಂಗಪ್ಪ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗಕ್ಕೆ ನಿರ್ದೇಶಕರನ್ನಾಗಿ ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಿರುವುದನ್ನು ಸಭೆಯ ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(e)/(07/23) |

## –:ಟಿಪ್ಪಣಿ:–

**ವಿಷಯ:** **ಪ್ರೊ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ವಿಶ್ವವಿದ್ಯಾನಿಲಯದ ಆಂತರಿಕ ಗುಣಮಟ್ಟ ಖಾತರಿ ಕೋಶದ (IQAC) ವಿಭಾಗಕ್ಕೆ ನಿರ್ದೇಶಕರನ್ನಾಗಿ ನೇಮಕ ಮಾಡಿರುವ ಬಗ್ಗೆ.**

ಉಲ್ಲೇಖ: ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ: ದಾವಿವಿ/ಮಾಸನಿ/61(ಎ)/2023-24/1202, ದಿನಾಂಕ: 15.07.2023

*****

ಮಾನ್ಯ ಕುಲಪತಿಗಳ ಆದೇಶಾನುಸಾರ ವಿಶ್ವವಿದ್ಯಾನಿಲಯದ ಉಲ್ಲೇಖಿತ ಅಧಿಕೃತ ಜ್ಞಾಪನ ಪತ್ರದಲ್ಲಿ ಪ್ರೊ॥ ಗೋವಿಂದಪ್ಪ ಎಂ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರನ್ನು ವಿಶ್ವವಿದ್ಯಾನಿಲಯದ ಆಂತರಿಕ ಗುಣಮಟ್ಟ ಖಾತರಿ ಕೋಶದ **(IQAC)** ವಿಭಾಗಕ್ಕೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಿರ್ದೇಶಕರನ್ನಾಗಿ ನೇಮಕ ಮಾಡಿರುವ ಬಗ್ಗೆ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಪ್ರೊ॥ ಗೋವಿಂದಪ್ಪ ಎಂ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ವಿಶ್ವವಿದ್ಯಾನಿಲಯದ ಆಂತರಿಕ ಗುಣಮಟ್ಟ ಖಾತರಿ ಕೋಶದ **(IQAC)** ವಿಭಾಗಕ್ಕೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಿರ್ದೇಶಕರನ್ನಾಗಿ ನೇಮಕ ಮಾಡಿರುವುದನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(f)/(07/23) |

## –:ಟಿಪ್ಪಣಿ:–

**ವಿಷಯ: ಗ್ರಂಥಾಲಯ ಸಲಹಾ ಸಮಿತಿಗೆ ಸಿಂಡಿಕೇಟ್ ವತಿಯಿಂದ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ಕುರಿತು.**

*****

ವಿಶ್ವವಿದ್ಯಾನಿಲಯದ ಗ್ರಂಥಾಲಯದ ಅಭಿವೃದ್ಧಿ, ವಿಭಾಗವಾರು ಅನುದಾನದ ಹಂಚಿಕೆ ಮತ್ತು ಇನ್ನಿತರೆ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಗ್ರಂಥಾಲಯ ಸಲಹಾ ಸಮಿತಿಯನ್ನು ರಚಿಸಬೇಕಾಗಿದ್ದು, ಸದರಿ ಸಲಹಾ ಸಮಿತಿಯಲ್ಲಿ ಸಿಂಡಿಕೇಟ್ ವತಿಯಿಂದ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಬೇಕಾಗಿದ್ದು, ಶ್ರೀಮತಿ ಶಾರದಾ ಪಾಟೀಲ್, ಧಾರವಾಡ ಇವರನ್ನು ಗ್ರಂಥಾಲಯ ಸಲಹಾ ಸಮಿತಿಗೆ ನಾಮನಿರ್ದೇಶನ ಮಾಡಿರುವುದಕ್ಕೆ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### <u>ನಿರ್ಣಯ</u>

ವಿಶ್ವವಿದ್ಯಾನಿಲಯದ ಗ್ರಂಥಾಲಯದ ಅಭಿವೃದ್ಧಿ, ವಿಭಾಗವಾರು ಅನುದಾನದ ಹಂಚಿಕೆ ಮತ್ತು ಇನ್ನಿತರೆ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಗ್ರಂಥಾಲಯ ಸಲಹಾ ಸಮಿತಿಗೆ ಶ್ರೀಮತಿ ಶಾರದಾ ಪಾಟೀಲ್, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ಗ್ರಂಥಾಲಯ ಸಲಹಾ ಸಮಿತಿಗೆ ನಾಮನಿರ್ದೇಶನ ಮಾಡಿರುವುದನ್ನು ಘಟನೋತ್ತರವಾಗಿ ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(g)/(07/23) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ಅರ್ಹ ಬೋಧಕೇತರ ನೌಕರರಿಗೆ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಅನ್ವಯ ಮುಂಬಡ್ತಿ ನೀಡುವ ಕುರಿತು.

*****

ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಧ್ಯಾಪಕೇತರ ನೌಕರರುಗಳಿಗೆ (ಅಧೀಕ್ಷಕರು, ಹಿರಿಯ ಸಹಾಯಕರು) ಮುಂಬಡ್ತಿ ನೀಡುವ ಸಂಬಂಧ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯನ್ನು ದಿನಾಂಕ:26.07.2023 ರಂದು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಮಿತಿಯು ವಿಶ್ವವಿದ್ಯಾನಿಲಯದ ಅರ್ಹ ಬೋಧಕೇತರ ನೌಕರರಿಗೆ ಮುಂಬಡ್ತಿ ನೀಡಲು ಶಿಫಾರಸ್ಸು ನೀಡಿರುವ ಹಿನ್ನೆಲೆಯಲ್ಲಿ ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| ಕ್ರ.ಸಂ. | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ನೌಕರರ ಹೆಸರು ಮತ್ತು ಹುದ್ದೆ | ಡಿಪಿಸಿ ಸಭೆಯು ಬಡ್ತಿಗೆ ಶಿಫಾರಸ್ಸು ಮಾಡಿರುವ ಬೋಧಕೇತರ ಹುದ್ದೆಗಳ ಪದನಾಮ | ವೇತನ ಶ್ರೇಣಿ | ರೋಸ್ಟರ್ |
|---|---|---|---|---|
| 01 | ಶ್ರೀ ಹನುಮಂತರಾಯ ಎಲ್,<br>ಹಿರಿಯ ಸಹಾಯಕರು | ಅಧೀಕ್ಷಕರು | ರೂ.43,100–83,900 | ಎಸ್.ಸಿ. |
| 02 | ಶ್ರೀ ಚಮನ್ ಸಾಬ್,<br>ಹಿರಿಯ ಸಹಾಯಕರು | ಅಧೀಕ್ಷಕರು | ರೂ.43,100–83,900 | 2ಬಿ |
| 03 | ಶ್ರೀಮತಿ ರೇಣುಕ ಎಸ್.ಆರ್,<br>ಪ್ರಥಮ ದರ್ಜೆ ಸಹಾಯಕರು | ಹಿರಿಯ ಸಹಾಯಕರು | ರೂ.37,900–70,850 | ಸಾಮಾನ್ಯ |

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅರ್ಹ ಬೋಧಕೇತರ ನೌಕರರುಗಳಿಗೆ ಮುಂಬಡ್ತಿ ನೀಡುವ ಸಂಬಂಧ ದಿನಾಂಕ:26.07.2023ರ ಡಿ.ಪಿ.ಸಿ. ಸಭೆಯ ನಿರ್ಣಯದಂತೆ ಅಧೀಕ್ಷಕ/ ಹಿರಿಯ ಸಹಾಯಕ ಹುದ್ದೆಗೆ ಮುಂಬಡ್ತಿ ನೀಡಲು ಶಿಫಾರಸ್ಸು ಮಾಡಿರುವ ಕುರಿತು ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸಭೆಯ ದಿನಾಂಕದಿಂದ ಅನ್ವಯವಾಗುವಂತೆ ಈ ಕೆಳಕಂಡಂತೆ ಮುಂಬಡ್ತಿ ಆದೇಶ ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು. ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

| ಕ್ರ.ಸಂ. | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ನೌಕರರ ಹೆಸರು ಮತ್ತು ಹುದ್ದೆ | ಮುಂಬಡ್ತಿ ನೀಡಲಾಗಿರುವ ಹುದ್ದೆ | ವೇತನ ಶ್ರೇಣಿ | ರೋಸ್ಟರ್ |
|---|---|---|---|---|
| 01 | ಶ್ರೀ ಹನುಮಂತರಾಯ ಎಲ್,<br>ಹಿರಿಯ ಸಹಾಯಕರು | ಅಧೀಕ್ಷಕರು | ರೂ.43,100–83,900 | ಎಸ್.ಸಿ. |
| 02 | ಶ್ರೀ ಚಮನ್ ಸಾಬ್,<br>ಹಿರಿಯ ಸಹಾಯಕರು | ಅಧೀಕ್ಷಕರು | ರೂ.43,100–83,900 | 2ಬಿ |
| 03 | ಶ್ರೀಮತಿ ರೇಣುಕ ಎಸ್.ಆರ್,<br>ಪ್ರಥಮ ದರ್ಜೆ ಸಹಾಯಕರು | ಹಿರಿಯ ಸಹಾಯಕರು | ರೂ.37,900–70,850 | ಸಾಮಾನ್ಯ |

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(h)/(07/23) |

## –:ಟಿಪ್ಪಣಿ:–

**ವಿಷಯ: ಕಛೇರಿ ಅಧೀಕ್ಷಕ ಹುದ್ದೆಯನ್ನು ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯಾಗಿ ಪರಿವರ್ತಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ 13 ವರ್ಷಗಳು ಕಳೆದರೂ ಕಾರ್ಯಪಾಲಕ ಅಭಿಯಂತರರು (ಸಿವಿಲ್) ಹುದ್ದೆ ಹೊರತು ಪಡಿಸಿ ಯಾವುದೇ ರೀತಿಯ ತಾಂತ್ರಿಕ ಹುದ್ದೆ ಮಂಜೂರು ಆಗಿರುವುದಿಲ್ಲ. ಇದರಿಂದಾಗಿ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದ ಹೆಚ್.ಟಿ. ವಿದ್ಯುತ್ ಸ್ಥಾವರಗಳ ನಿರ್ವಹಣೆ, ವಸತಿ ನಿಲಯಗಳ ನೀರು ಸರಬರಾಜು ಮಾಡುವ ಬೋರವೆಲ್ ಮೋಟಾರುಗಳ ನಿರ್ವಹಣೆ, ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ, ತುರುವನೂರು ಘಟಕ ಕಾಲೇಜು, ಹರಿಯಬ್ಬೆ ಘಟಕ ಕಾಲೇಜು, ಇಲ್ಲಿನ ಆವರಣಗಳಲ್ಲಿನ ವಿದ್ಯುತ್ ವ್ಯವಸ್ಥೆಯ ನಿರ್ವಹಣೆ, ಬೋರವೆಲ್ ಮೋಟಾರುಗಳ ನಿರ್ವಹಣೆ ಮತ್ತು ಸೋಲಾರ್ ಪ್ಯಾನೆಲ್‌ಗಳ ನಿರ್ವಹಣೆ ಕಷ್ಟವಾಗಿರುತ್ತದೆ. ವಿದ್ಯುತ್ ನಿರ್ವಹಣೆ ವ್ಯವಸ್ಥೆಯು Essential Service ಆಗಿರುವುದರಿಂದ ಸಹಾಯಕ ಅಭಿಯಂತರರು(ವಿದ್ಯುತ್) ಹುದ್ದೆ ಅವಶ್ಯಕವಾಗಿ ಬೇಕಾಗಿರುತ್ತದೆ. ಆದ್ದರಿಂದ ಸರ್ಕಾರದಿಂದ ಸಹಾಯಕ ಅಭಿಯಂತರರು(ವಿದ್ಯುತ್) ಹುದ್ದೆ ಮಂಜೂರು ಆಗದ ಕಾರಣ ವಿಶ್ವವಿದ್ಯಾನಿಲಯದಲ್ಲಿ ಮಂಜೂರಾಗಿ ಖಾಲಿ ಉಳಿದಿರುವ ಕಛೇರಿ ಅಧೀಕ್ಷಕ ಹುದ್ದೆಗಳಲ್ಲಿ ಒಂದು ಕಛೇರಿ ಅಧೀಕ್ಷಕ ಹುದ್ದೆಯನ್ನು ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯಾಗಿ ಪರಿವರ್ತಿಸಲು ಮತ್ತು ಕಛೇರಿ ಅಧೀಕ್ಷಕ ಹುದ್ದೆಯ ಮೂಲ ವೇತನ ಶ್ರೇಣಿ (ರೂ.43,100 – 83,900.00) ಹಾಗೂ ಸಹಾಯಕ ಅಭಿಯಂತರರು(ವಿದ್ಯುತ್) ಹುದ್ದೆಯ ಮೂಲ ವೇತನ ಶ್ರೇಣಿ (ರೂ.43,100 – 83,900.00) ಒಂದೇ ಆಗಿದ್ದು, ಕಛೇರಿ ಅಧೀಕ್ಷಕ ಹುದ್ದೆಯನ್ನು ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯಾಗಿ ಪರಿವರ್ತಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ಮಂಜೂರಾಗಿ ಖಾಲಿ ಉಳಿದಿರುವ ಕಛೇರಿ ಅಧೀಕ್ಷಕ ಹುದ್ದೆಗಳಲ್ಲಿ ಒಂದು ಕಛೇರಿ ಅಧೀಕ್ಷಕ ಹುದ್ದೆಯನ್ನು ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯ ಅವಶ್ಯಕತೆ ತುಂಬಾ ಇರುವುದರಿಂದ ಒಂದು ಅಧೀಕ್ಷಕ ಹುದ್ದೆಯನ್ನು ಪರಿವರ್ತಿಸುವ ಕುರಿತು ಸುಧೀರ್ಘ ಚರ್ಚೆಯ ನಂತರ ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(i)/(07/23) |

## -:ಟಿಪ್ಪಣಿ:-

**ವಿಷಯ: ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಗೆ ಪ್ರಭಾರೆ ಹಣಕಾಸು ಅಧಿಕಾರಿಯನ್ನು ನೇಮಕ ಮಾಡುವ ಕುರಿತು.**

ಉಲ್ಲೇಖ: ಸರ್ಕಾರದ ಪತ್ರಸಂಖ್ಯೆ:ಸಂ: ಆಇ 170 ರಾಲೆಪ 2023 (ಭಾಗ-1). ದಿನಾಂಕ:26.07.2023.

*****

ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳಾಗಿದ್ದ ಶ್ರೀಮತಿ ಪ್ರಿಯಾಂಕ ಡಿ., ಇವರು ಉಲ್ಲೇಖಿತ ಸರ್ಕಾರದ ಪತ್ರದನುಸಾರ – 'ಲೆಕ್ಕಾಧಿಕಾರಿ, ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ' – ಇಲ್ಲಿಗೆ ವರ್ಗಾವಣೆಯಾಗಿರುತ್ತಾರೆ. ಆದ್ದರಿಂದ, ಸದರಿ ಹುದ್ದೆಗೆ ಸರ್ಕಾರದಿಂದ ಅಧಿಕಾರಿ ನಿಯುಕ್ತಿಯಾಗುವವರೆಗೆ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಭಾರೆ ಹಣಕಾಸು ಅಧಿಕಾರಿಯನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಡೀನರುಗಳ ಅವಧಿ ತುಂಬಾ ಕಡಿಮೆ ಇರುವುದರಿಂದ ಹಾಗೂ ಹಣಕಾಸಿನ ವಿಭಾಗಕ್ಕೆ ಕನಿಷ್ಠ ಹಣಕಾಸಿನ ವ್ಯವಸ್ಥೆ ಹಾಗೂ ಖಾತೆಗಳ ನಿರ್ವಹಣೆ ಬಗ್ಗೆ ಅನುಭವ ಇರುವವರನ್ನು ಹಣಕಾಸು ಅಧಿಕಾರಿಯನ್ನಾಗಿ (ಪ್ರಭಾರ) ನೇಮಕ ಮಾಡಬೇಕಾಗಿರುವುದರಿಂದ ಪ್ರೊ. ಶಶಿಧರ್ ಆರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಡಳಿತ ನಿರ್ವಹಣಾ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ಈಗಾಗಲೇ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಉಪ ಹಣಕಾಸು ಅಧಿಕಾರಿಯಾಗಿ ಮತ್ತು ಹಣಕಾಸು ವಿಭಾಗದ ವಿಶೇಷ ಅಧಿಕಾರಿಯಾಗಿ ಕೆಲಸ ಮಾಡಿದ ಅನುಭವ ಇರುವುದರಿಂದ ಸಿಂಡಿಕೇಟ್ ಸದಸ್ಯರು ಸರ್ವಾನುಮತದಿಂದ ಪ್ರೊ. ಆರ್. ಶಶಿಧರ್ ಇವರನ್ನು ಹಣಕಾಸು ಅಧಿಕಾರಿ(ಪ್ರಭಾರ)ಯನ್ನಾಗಿ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು | ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(a)/(07/23) |

## -:ಟಿಪ್ಪಣಿ:-

ವಿಷಯ: **2023-24ನೇ ಸಾಲಿನಲ್ಲಿ MCA ಕೋರ್ಸ್‌ನ್ನು ಪ್ರಾರಂಭಿಸಲು ಪ್ರಯೋಗಾಲಯಕ್ಕೆ ಅಗತ್ಯವಿರುವ ಕಂಪ್ಯೂಟರ್‌ಗಳು, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಕಿಯೋನಿಕ್ಸ್ (KEONICS) ಮೂಲಕ ಖರೀದಿಸುವ ಕುರಿತು.**

ಉಲ್ಲೇಖ: ಅಧ್ಯಕ್ಷರು, ಗಣಕವಿಜ್ಞಾನ ಅಧ್ಯಯನ ವಿಭಾಗ ಇವರ ಪತ್ರಸಂಖ್ಯೆ: ದಾವಿವಿ:ಗವಿ:2023-24/1586 ದಿನಾಂಕ:17.07.2023.

*****

ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಹೊಸದಾಗಿ Master of Computer Application Course (MCA) ನ್ನು AICTE ಯ ಅನುಮೋದನೆಯೊಂದಿಗೆ 2023-24ನೇ ಸಾಲಿನಲ್ಲಿ ಪ್ರಾರಂಭಿಸಲು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಯೋಗಾಲಯಕ್ಕೆ ಅಗತ್ಯವಿರುವ ಈ ಕೆಳಕಂಡ ಯಂತ್ರೋಪಕರಣಗಳು, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಒದಗಿಸುವಂತೆ ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ ಇವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

| Sl. No | Requirements | Quantity |
|---|---|---|
| 1 | Computer | 60 |
| 2 | Computer Chairs | 60 |
| 3 | Computer Tables | 60 |
| 4 | LAN for 60 Computer + AC | 01 |
| 5 | Projectors (For Clasrooms-02, Lab-1) | 03 |
| 6 | Printers | 02 |

ಆದ್ದರಿಂದ, ಈ ಮೇಲ್ಕಂಡ ಯಂತ್ರೋಪಕರಣಗಳು, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

2023-24ನೇ ಸಾಲಿನಲ್ಲಿ MCA ಕೋರ್ಸ್‌ನ್ನು ಪ್ರಾರಂಭಿಸಲು ಪ್ರಯೋಗಾಲಯಕ್ಕೆ ಅಗತ್ಯವಿರುವ ಈ ಕೆಳಕಂಡ ಯಂತ್ರೋಪಕರಣ, ಪೀಠೋಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಕಿಯೋನಿಕ್ಸ್ (KEONICS) ಮುಖಾಂತರ ಖರೀದಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿ ಒಮ್ಮತದಿಂದ ಅನುಮೋದನೆ ನೀಡಿತು.

| Sl. No | Requirements | Quantity |
|---|---|---|
| 1 | Computer | 65 |
| 2 | Computer Chairs | 60 |
| 3 | Computer Tables | 60 |
| 4 | LAN for 60 Computer + AC | 01 |
| 5 | Projectors (For Clasrooms-02, Lab-1) | 03 |
| 6 | Printers | 05 |

ಕುಲಸಚಿವರು    ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(07/23) |

## –:ಟಿಪ್ಪಣಿ:–

**ವಿಷಯ: 2023–24 ಸಾಲಿಗೆ ಹೊರಗುತ್ತಿಗೆ ಮಾನವ ಸಂಪನ್ಮೂಲ ಸೇವೆಯನ್ನು ಮುಂದುವರೆಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ, ಪಿ.ಜಿ. ಸೆಂಟರ್ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಬೇಕಾಗಿರುವ ಮಾನವ ಸಂಪನ್ಮೂಲ (ಗುತ್ತಿಗೆ ನೌಕರರ) ಸೇವೆಯನ್ನು ಮೆ: ಬಿ.ಕೆ.ಆರ್. ಸೆಕ್ಯೂರಿಟಿ ಏಜೆನ್ಸಿ ಹರಿಹರ ಇವರಿಂದ ಪಡೆಯಲಾಗಿತ್ತು. ಆದರೆ, ಸದರಿಯವರ ಅವಧಿಯು ಮುಗಿದಿದ್ದು 2023–24ನೇ ಸಾಲಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಮುಂದಿನ ಅವದಿಗೆ ಮುಂದುವರೆಸುವ ಅಥವಾ ಟೆಂಡರ್ ಕರೆಯುವ ಬಗ್ಗೆ ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

2023–24 ಸಾಲಿಗೆ ಹೊರಗುತ್ತಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಏಪ್ರಿಲ್–2023ರ ಮಾಹೆಯಲ್ಲಿ ಟೆಂಡರ್ ಕರೆಯಬೇಕಾಗಿತ್ತು. ಆದರೆ, ಕರ್ನಾಟಕ ವಿಧಾನ ಸಭಾ ಚುನಾವಣೆ ಪ್ರಯುಕ್ತ ನೀತಿ ಸಂಹಿತೆ ಜಾರಿಯಾಗಿದ್ದರಿಂದ ಟೆಂಡರ್ ಕರೆಯಲು ಸಾಧ್ಯವಾಗಲಿಲ್ಲ. ಸದರಿಯವರ ಸೇವೆಯು ತೃಪ್ತಿಕರವಾಗಿರುವುದರಿಂದ ಮಾರ್ಚ್–2024ರ ವರೆಗೆ ಮುಂದುವರೆಸಲು ಸಭೆಯ ಒಮ್ಮತದಿಂದ ನಿರ್ಣಯಿಸಿ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(07/23) |

## –:ಟಿಪ್ಪಣಿ:–

**ವಿಷಯ: ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳ ಊಟೋಪಚಾರಕ್ಕಾಗಿ ಚೇರ್(40) ಹಾಗೂ ಟೇಬಲ್(12) ಖರೀದಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಸಿಂಟಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳಿಗೆ ಆಗಮಿಸುವ ಸದಸ್ಯರುಗಳಿಗೆ ಊಟೋಚಾರ ಏರ್ಪಡಿಸಲು ಅವಶ್ಯವಿರುವ 40 ಚೇರ್ ಹಾಗೂ 12 ಟೇಬಲ್‌ಗಳು ಬೇಕಾಗಿರುತ್ತದೆ. ಆದ್ದರಿಂದ ಸದರಿ ಚೇರ್ ಹಾಗೂ ಟೇಬಲ್‌ಗಳನ್ನು ತುಂಡುಗುತ್ತಿಗೆ/ Mannual Tender ಮೂಲಕ ಖರೀದಿಸಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಸಿಂಟಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳಿಗೆ ಆಗಮಿಸುವ ಸದಸ್ಯರುಗಳಿಗೆ ಊಟೋಚಾರ ಏರ್ಪಡಿಸಲು ಅವಶ್ಯವಿರುವ 40 ಚೇರ್ ಹಾಗೂ 12 ಟೇಬಲ್‌ಗಳು ಬೇಕಾಗಿರುತ್ತದೆ. ಆದ್ದರಿಂದ ಸದರಿ ಚೇರ್ ಹಾಗೂ ಟೇಬಲ್‌ಗಳನ್ನು ತುಂಡುಗುತ್ತಿಗೆ/ Mannual Tender ಮೂಲಕ ಖರೀದಿಸಲು ಸಭೆಯ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ | |
|---|---|
| ವಿಷಯ ಸಂಖ್ಯೆ: | ಸಿಂ.04(a)/(07/23) |

## –:ಟಿಪ್ಪಣಿ:–

**ವಿಷಯ: 2023–24ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ನೀಡಿರುವುದಕ್ಕೆ ಸ್ಥಿರೀಕರಣಕ್ಕಾಗಿ ಹಾಗೂ ಅನುಮೋದನೆ ಕುರಿತು.**

*******

ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ/ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ವಿದ್ಯಾರ್ಥಿಗಳ ಸೇರ್ಪಡೆಯ ಹೆಚ್ಚಳದಿಂದಾಗಿ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನಲ್ಲಿ ಬೋಧಿಸುತ್ತಿರುವ ಸ್ನಾತಕ/ ಸ್ನಾತಕೋತ್ತರ ಪದವಿಗಳ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ಕೋರಿಕೆಗಳನ್ನು ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಪ್ರವೇಶಾತಿಗೆ ಈಗಾಗಲೇ ಅನುಮತಿ ನೀಡಲಾಗಿದೆ (ಅನುಬಂಧ–1) ಹಾಗೂ ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರು 2023–24ನೇ ಶೈಕ್ಷಣಿಕ ಸಾಲಿಗೆ ಇನ್ನೂ ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸುತ್ತಿದ್ದಾರೆ.

ತತ್ಸಂಬಂಧವಾಗಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, 2023–24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ನೀಡಿರುವ ಹೆಚ್ಚುವರಿ ಪ್ರವೇಶ ಮಿತಿಗೆ ಅನುಮತಿ ನೀಡಲಾಗಿರುವುದನ್ನು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಸ್ಥಿರೀಕರಣಕ್ಕಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

2023–24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ನೀಡಿರುವ ಈ ಕೆಳಕಂಡಂತೆ ಹೆಚ್ಚುವರಿ ಪ್ರವೇಶ ಮಿತಿಗೆ ಅನುಮತಿ ನೀಡಲಾಗಿರುವುದನ್ನು ಸಭೆಯು ಪರಿಶೀಲಿಸಿ ಒಮ್ಮತದಿಂದ ಸ್ಥಿರೀಕರಿಸಿ ಅನುಮೋದಿಸಿತು.

| ಕ್ರ.ಸಂ | ಕಾಲೇಜಿನ ಹೆಸರು | ಪದವಿ | ಪ್ರಸ್ತುತ ಇರುವ ಪ್ರವೇಶ ಮಿತಿ | ನೀಡಲಾಗಿರುವ ಪ್ರವೇಶಮಿತಿ |
|---|---|---|---|---|
| 1 | ಬಾಪೂಜಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ | ಬಿ.ಕಾಂ | 60x3 | 45 |
| | | ಬಿ.ಸಿ.ಎ | 60x5 | 110 |
| 2 | ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ | ಬಿ.ಸಿ.ಎ | 60x1 | 30 |
| 3 | ಬಿ.ಎಸ್ ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | ಬಿ.ಸಿ.ಎ | 60x2 | 60 |

ಮುಂದುವರೆದಿದೆ..

ಕುಲಸಚಿವರು

ಕುಲಪತಿಗಳು

| | | | | |
|---|---|---|---|---|
| 4 | ಜೆ.ಹೆಚ್. ಪಟೇಲ್ ಇನ್‌ಸ್ಟಿಟ್ಯೂಟ್ ಅಫ್ ಮ್ಯಾನೆಜ್‌ಮೆಂಟ್ ಅಂಡ್ ಟೆಕ್ನಾಲಜಿ, ದಾವಣಗೆರೆ | ಬಿ.ಸಿ.ಎ | 50x1 | 20 |
| 5 | ಅಜ್ಜಂಪುರ ಗೋವಿಂದಸ್ವಾಮಿ ಭಾಗ್ಯಲಕ್ಷ್ಮಮ್ಮ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | ಬಿ.ಕಾಂ | 100 | 20 |
| | | ಬಿ.ಸಿ.ಎ | 30x1 | 20 |
| 6 | ಬಿಟ್ಸ್ ಹೈ–ಟೆಕ್ ಕಾಲೇಜು, ಚಿತ್ರದುರ್ಗ | ಬಿ.ಸಿ.ಎ | 40x1 | 20 |
| 7 | ಎಂ.ಎಸ್.ಬಿ ಆರ್ಟ್ಸ್ ಅಂಡ್ ಕಾಮರ್ಸ್, ಕಾಲೇಜು, ದಾವಣಗೆರೆ | ಬಿ.ಎ., | 180x1 | 45 |
| 8 | ಇಂಟರ್‌ಫೇಸ್ ಕಾಲೇಜ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್, ದಾವಣಗೆರೆ | ಬಿ.ಸಿ.ಎ | 60x1 | 15 |
| 9 | ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಕೂಲ್ ಅಫ್ ಹೈ–ಟೆಕ್ ಎಜುಕೇಷನ್, ದಾವಣಗೆರೆ | ಬಿ.ಸಿ.ಎ | 60x3 | 30 |
| 12 | ಜಿ.ಎಂ.ಎಸ್. ಅಕ್ಯಾಡೆಮಿ, ದಾವಣಗೆರೆ | ಬಿ.ಸಿ.ಎ | 30x3 | 30 |
| 12 | ಭದ್ರಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಅಂಡ್ ಇನ್ಫರ್‌ಮೇಷನ್ ಸೈನ್ಸ್ ಸ್ಟಡೀಸ್, ದಾವಣಗೆರೆ | ಬಿ.ಸಿ.ಎ., | 60x01 | 30 |
| 13 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ | ಬಿ.ಕಾಂ, | 140x1 | 100 |
| 14 | ಡಾನ್ ಬಾಸ್ಕೊ ಡಿಗ್ರಿ ಕಾಲೇಜು, ಚಿತ್ರದುರ್ಗ | ಬಿ.ಸಿ.ಎ., | 60x1 | 15 |
| 15 | ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ | ಬಿ.ಸಿ.ಎ., | 40x1 | 40 |
| 16 | ಬಾಪೂಜಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. | ಬಿ.ಕಾಂ, | 60 x1 | 30 |
| 17 | ಆರ್.ಜಿ ಇನ್ಸಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ದಾವಣಗೆರೆ. | ಬಿ.ಸಿ.ಎ., | 60x1 | 30 |
| 18 | ಡಾನ್ ಬಾಸ್ಕೋ ಪದವಿ ಕಾಲೇಜು, ಚಿತ್ರದುರ್ಗ. | ಬಿ.ಸಿ.ಎ., | 90x1 | 10 |
| 19 | ದವನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ದಾವಣಗೆರೆ | ಬಿ.ಸಿ.ಎ | 60x1 | 15 |
| 20 | ನೂತನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ದಾವಣಗೆರೆ | ಬಿ.ಸಿ.ಎ | 120 | 30 |
| 21 | ಬಿ.ಎಸ್ ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಬಿ.ಬಿ.ಎ | 60x1 | 15 |
| 22 | ಎಸ್.ಆರ್.ಎಸ್. ಪದವಿ ಮಹಾವಿದ್ಯಾಲಯ, ಚಿತ್ರದುರ್ಗ. | ಬಿ.ಸಿ.ಎ | 60x2 | 40 |
| 23 | ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ದಾವಣಗೆರೆ. | ಬಿ.ಸಿ.ಎ | 60 | 30 |

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ | |
|---|---|
| ವಿಷಯ ಸಂಖ್ಯೆ: | ಸಿಂ.04(b)/(07/23) |

## –:ಟಿಪ್ಪಣಿ:–

**ವಿಷಯ:** **ಚಿತ್ರದುರ್ಗ ತಾಲ್ಲೂಕು ಜಿ. ಆರ್. ಹಳ್ಳಿ ಗ್ರಾಮದ ಬಳಿ ಇರುವ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ ಜ್ಞಾನಗಂಗೋತ್ರಿ ಆವರಣವನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ತಾತ್ಕಾಲಿಕವಾಗಿ ನೀಡುವಂತೆ ಕೋರಿರುವ ಕುರಿತು.**

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಇಡಿ 12 ಯುಎನ್ಇ 2023, ದಿನಾಂಕ:19.07.2023.

*****

2023–24ನೇ ಸಾಲಿನಿಂದ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯನ್ನು ಪ್ರಾರಂಭಿಸಲು ಚಿತ್ರದುರ್ಗ ತಾಲ್ಲೂಕು ಜಿ.ಆರ್. ಹಳ್ಳಿ ಗ್ರಾಮದ ಬಳಿ ಇರುವ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿಯ ಆವರಣದಲ್ಲಿ ಅಗತ್ಯವಾದ ಸ್ಥಳಾವಕಾಶವನ್ನು ನೀಡಲು ಉಲ್ಲೇಖಿತ ಸರ್ಕಾರದ ಪತ್ರದನುಸಾರ ವೈದ್ಯಕೀಯ ಶಿಕ್ಷಣ ಇಲಾಖೆಯ ವಶಕ್ಕೆ ತಾತ್ಕಾಲಿಕವಾಗಿ **ಈ ಕೆಳಕಂಡ ಷರತ್ತುಗಳಿಗೊಳಪಡಿಸಿ** 02 ವರ್ಷಗಳ ಅವಧಿಗಾಗಿ ನೀಡಲು ಉನ್ನತ ಶಿಕ್ಷಣ ಇಲಾಖೆಯು ಅನುಮತಿ ನೀಡಿದೆ.

1. ಸ್ನಾತಕೋತ್ತರ ಕೇಂದ್ರವಾದ ಜ್ಞಾನಗಂಗೋತ್ರಿ ಆವರಣವನ್ನು ತಾತ್ಕಾಲಿಕವಾಗಿ ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
2. ಜ್ಞಾನಗಂಗೋತ್ರಿ ಆವರಣವನ್ನು ತಾತ್ಕಾಲಿಕವಾಗಿ ನೀಡಲಾಗಿದ್ದು, ಖಾಸಗಿ ಹಕ್ಕನ್ನು ತಾತ್ಕಾಲಿಕವಾಗಿ ಸೃಷ್ಟಿಸತಕ್ಕದ್ದಲ್ಲ ಮತ್ತು ಪರಭಾರೆ ಮಾಡತಕ್ಕದ್ದಲ್ಲ.
3. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ತಾತ್ಕಾಲಿಕವಾಗಿ ವೈದ್ಯಕೀಯ ಶಿಕ್ಷಣ ಇಲಾಖೆ ವಶಕ್ಕೆ ನೀಡಲಾದ ಸ್ನಾತಕೋತ್ತರ ಕೇಂದ್ರವಾದ ಜ್ಞಾನಗಂಗೋತ್ರಿ ಆವರಣವನ್ನು ಹಿಂಪಡೆದುಕೊಳ್ಳಲಾಗುವುದು.

ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ಮುಂದುವರೆದಿದೆ..**

ಕುಲಸಚಿವರು

ಕುಲಪತಿಗಳು

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿಯ ಆವರಣದಲ್ಲಿರುವ ಸಮಾಜ ವಿಜ್ಞಾನ ಭವನ ಕಟ್ಟಡದ ಎರಡನೇ ಅಂತಸ್ತಿನಲ್ಲಿರುವ ಈ ಕೆಳಕಂಡ ಕೊಠಡಿಗಳನ್ನು ವಿಶ್ವವಿದ್ಯಾನಿಲಯದ ಕುಲಸಚಿವರೊಂದಿಗೆ ಒಡಂಬಡಿಕೆ (MOU) ಮಾಡಿಕೊಂಡ ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯ ವಶಕ್ಕೆ ತಾತ್ಕಾಲಿಕವಾಗಿ ಈ ಮೇಲ್ಕಂಡ ಷರತ್ತುಗಳಿಗೊಳಪಡಿಸಿ 02 ವರ್ಷಗಳ ಅವಧಿಗಾಗಿ ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

| ಕ್ರ.ಸಂ. | ಕೊಠಡಿಗಳ ವಿವರ | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1. | ಬೋಧನ ಕೊಠಡಿ ಸಂಖ್ಯೆ 01 | 80 |
| 2. | ಬೋಧನ ಕೊಠಡಿ ಸಂಖ್ಯೆ 02 | 80 |
| 3. | ಬೋಧನ ಕೊಠಡಿ ಸಂಖ್ಯೆ 03 | 40 |
| 4. | ಬೋಧನ ಕೊಠಡಿ ಸಂಖ್ಯೆ 04 | 40 |
| 5. | ಕನ್ನಡ ಅಧ್ಯಯನ ವಿಭಾಗದ ಬೋಧನ ಸಹಾಯಕರ ಕೊಠಡಿ | 30 |
| 6. | ಸಭಾಂಗಣ | 150 |
| 7. | ಕಂಪ್ಯೂಟರ್ ಲ್ಯಾಬ್ | 150 |
| 8. | ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಬೋಧನಾ ಸಹಾಯಕರ ಕೊಠಡಿ | |
| 9. | ಇದರೊಂದಿಗೆ ಸಮಾಜ ವಿಜ್ಞಾನ ವಿಭಾಗ ಕಟ್ಟಡದ ಮೇಲಿನ ಅಂತಸ್ತಿನಲ್ಲಿ ಖಾಲಿ ಇರುವ ಜಾಗದಲ್ಲಿ ತಾತ್ಕಾಲಿಕವಾಗಿ ತರಗತಿ ಕೊಠಡಿಗಳನ್ನು ನಿರ್ಮಿಸಿಕೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. | |

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)/(07/23) |

## –:ಟಿಪ್ಪಣಿ:–

**ವಿಷಯ: 2022–23 ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ಹಣ ಪಾವತಿ ಮಾಡುವ ಕುರಿತು.**

*******

ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018–19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ–ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆ M/S;Logisys, Bangalore ಇವರಿಂದ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.211/– ರಂತೆ ಅಂದಾಜು 25,493 ವಿದ್ಯಾರ್ಥಿಗಳಿಗೆ ರೂ.53,79,023/–ಗಳನ್ನು ಫೆಬ್ರವರಿ/ ಮಾರ್ಚ್–2023ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S; Logisys, Bangalore ರವರು ಹಣ ಪಾವತಿ ಮಾಡಲು ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಬಿಲ್ಲುಗಳ ವಿವರ ಈ ಕೆಳಕಂಡತಿದೆ.

| ಕ್ರ.ಸಂ. | ವಿವರಗಳು | ಬಿಲ್ ನಂ. | ಮೊತ್ತ | ಷರಾ |
|---|---|---|---|---|
| 1 | ಮೊದಲನೇ ಕಂತಿನ ಹಣ (ಶೇಕಡ 30% ರಷ್ಟು) | BN/043/23-24 | ರೂ. 16,13,706–00 | ಹಣ ಪಾವತಿಸಬೇಕು. |
| 2 | ಎರಡನೇ ಕಂತಿನ ಹಣ (ಶೇಕಡ 30% ರಷ್ಟು) | BN/044/23-24 | ರೂ. 16,13,706–00 | ಹಣ ಪಾವತಿಸಬೇಕು. |
| 3 | ಮೂರನೇ ಕಂತಿನ ಹಣ (ಶೇಕಡ 30% ರಷ್ಟು) | BN/045/23-24 | ರೂ. 16,13,706–00 | ಹಣ ಪಾವತಿಸಬೇಕು. |
| | | **ಒಟ್ಟು ಮೊತ್ತ:** | **ರೂ. 48,41,118–00** | |

ಆದ್ದರಿಂದ, ಪ್ರತಿ ಕಂತಿನ ಶೇಕಡ 30% ರಂತೆ ಒಟ್ಟು 03 ಕಂತಿನ ಶೇಕಡ 90% ರಷ್ಟು ಮೊತ್ತ ರೂ. 48,41,118/– (ರೂಪಾಯಿಗಳು ನಲವತ್ತೆಂಟು ಲಕ್ಷದ ನಲವತ್ತೊಂದು ಸಾವಿರದ ಒಂದು ನೂರ ಹದಿನೆಂಟು ಮಾತ್ರ) ಗಳಾಗಿರುತ್ತದೆ. ಸದರಿ ಬಿಲ್ಲುಗಳ ಮೊತ್ತವನ್ನು M/S;Logisys, Bangalore ಇವರಿಗೆ ಪಾವತಿಸಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

## ನಿರ್ಣಯ

ಫೆಬ್ರವರಿ/ ಮಾರ್ಚ್–2023 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S; Logisys, Bangalore – ಇವರ **ಮೂರನೇ ಕಂತಿನ** ಬಿಲ್ಲುಗಳನ್ನು ದಿನಾಂಕ:31.07.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ. 48,41,118/– ಗಳನ್ನು M/S;Logisys, Bangalore -** ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(b)/(07/23) |

## –:ಟಿಪ್ಪಣಿ:–

**ವಿಷಯ: 2022–23 ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ಹಣ ಪಾವತಿ ಮಾಡುವ ಕುರಿತು.**

*******

ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018–19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ–ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt. Ltd, Bangalore ಇವರಿಂದ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.133/– ರಂತೆ ಅಂದಾಜು 25,493 ವಿದ್ಯಾರ್ಥಿಗಳಿಗೆ ರೂ.33,90,569/– ಗಳನ್ನು ಫೆಬ್ರವರಿ/ ಮಾರ್ಚ್–2023ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Unicalre Solutions Pvt. Ltd, Bangalore ರವರು ಹಣ ಪಾವತಿ ಮಾಡಲು ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಬಿಲ್ಲುಗಳ ವಿವರ ಈ ಕೆಳಕಂಡತಿದೆ.

| ಕ್ರ.ಸಂ. | ವಿವರಗಳು | ಬಿಲ್ ನಂ. | ಮೊತ್ತ | ಷರಾ |
|---|---|---|---|---|
| 1 | ಮೊದಲನೇ ಕಂತಿನ ಹಣ (ಶೇಕಡ 30% ರಷ್ಟು) | BN/UC/024/23-24 | ರೂ. 10,17,170–00 | ಹಣ ಪಾವತಿಸಬೇಕು. |
| 2 | ಎರಡನೇ ಕಂತಿನ ಹಣ (ಶೇಕಡ 30% ರಷ್ಟು) | BN/UC/025/23-24 | ರೂ. 10,17,170–00 | ಹಣ ಪಾವತಿಸಬೇಕು. |
| 3 | ಮೂರನೇ ಕಂತಿನ ಹಣ (ಶೇಕಡ 30% ರಷ್ಟು) | BN/UC/026/23-24 | ರೂ. 10,17,170–00 | ಹಣ ಪಾವತಿಸಬೇಕು. |
| | | **ಒಟ್ಟು ಮೊತ್ತ:** | **ರೂ. 30,51,510–00** | |

ಆದ್ದರಿಂದ ಪ್ರತಿ ಕಂತಿನ ಶೇಕಡ 30% ರಂತೆ ಒಟ್ಟು 03 ಕಂತಿನ ಶೇಕಡ 90% ರಷ್ಟು ಹಣದ ಮೊತ್ತ ರೂ. 30,51,510–00 (ರೂಪಾಯಿಗಳು ಮೂವತ್ತು ಲಕ್ಷದ ಐವತ್ತೊಂದು ಸಾವಿರದ ಐದು ನೂರ ಹತ್ತು ಮಾತ್ರ) ಗಳಾಗಿರುತ್ತದೆ. ಸದರಿ ಬಿಲ್ಲುಗಳ ಮೊತ್ತವನ್ನು M/S;Unicalre Solutions Pvt. Ltd, Bangalore ಇವರಿಗೆ ಪಾವತಿಸಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಫೆಬ್ರವರಿ/ ಮಾರ್ಚ್–2023 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt. Ltd, Bangalore – ಇವರ **ಮೂರನೇ ಕಂತಿನ** ಬಿಲ್ಲುಗಳನ್ನು ದಿನಾಂಕ:31.07.2023 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ. 30,51,510–00** ಗಳನ್ನು M/S;Unicalre Solutions Pvt. Ltd, Bangalore - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(c)/(07/23) |

## –:ಟಿಪ್ಪಣಿ:–

**ವಿಷಯ: 2023–24ನೇ ಸಾಲಿನ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯುವ ಸಲುವಾಗಿ ಇ–ಟೆಂಡರ್ ಕರೆಯುವ ಕುರಿತು.**

*******

2023–24ನೇ ಸಾಲಿನಲ್ಲಿ ನಡೆಯುವ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಅಕ್ರಮ ತಡೆಯಲು ಜಾಗೃತದಳದ ಸಿಬ್ಬಂದಿಗಳು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲು ಹಾಗೂ ಪರೀಕ್ಷಾ ನಂತರ ಉತ್ತರ ಪತ್ರಿಕೆಗಳನ್ನು ವಿಶ್ವವಿದ್ಯಾನಿಲಯಕ್ಕೆ ತರಲು ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯುವ ಸಲುವಾಗಿ ಇ–ಟೆಂಡರ್ ಕರೆಯುವುದಕ್ಕೆ ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಅಕ್ರಮ ತಡೆಯಲು ಜಾಗೃತದಳದ ಸಿಬ್ಬಂದಿಗಳು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲು ಹಾಗೂ ಪರೀಕ್ಷಾ ನಂತರ ಉತ್ತರ ಪತ್ರಿಕೆಗಳನ್ನು ವಿಶ್ವವಿದ್ಯಾನಿಲಯಕ್ಕೆ ತರಲು ದಿನದ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯುವ ಸಲುವಾಗಿ ಇ–ಟೆಂಡರ್ ಕರೆದು L-1 ಬಿಡ್‌ದಾರರಿಗೆ ದಿನದ ಬಾಡಿಗೆ ಮೇಲೆ ವಾಹನಗಳನ್ನು ಸರಬರಾಜು ಮಾಡಲು ಸಭೆಯು ನಿರ್ಣಯಿಸಿ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(d)/(07/23) |

## –:ಟಿಪ್ಪಣಿ:–

ವಿಷಯ: **2023–24ನೇ ಸಾಲಿನ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಖಾಲಿ ಉತ್ತರ ಪತ್ರಿಕೆಗಳ ಸರಬರಾಜುಗಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸುವ ಬಗ್ಗೆ.**

*******

2023–24ನೇ ಸಾಲಿನಲ್ಲಿ ನಡೆಯುವ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಹೊಸದಾಗಿ ಪ್ರಾಯೋಗಿಕ/ ಥಿಯರಿ ಖಾಲಿ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಹೊಸದಾಗಿ 12 ಲಕ್ಷ ಪ್ರಾಯೋಗಿಕ/ ಥಿಯರಿ ಖಾಲಿ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು ಸಭೆಯ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(e)/(07/23) |

## –:ಟಿಪ್ಪಣಿ:–

**ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯಲ್ಲಿ "ದ್ವಿಗುಣ ಅವಧಿ" ಪೂರೈಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ವಿಶೇಷ ಅನುಮತಿ ನೀಡುವ ಬಗ್ಗೆ.**

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜು/ ವಿಭಾಗಗಳಲ್ಲಿ ಬಿ.ಇಡಿ. ಸ್ನಾತಕ ಮತ್ತು ಸ್ನಾತಕೋತ್ತರ ಎಲ್ಲಾ ಪದವಿಗಳಲ್ಲಿ 2009–10 ರಿಂದ 2016–17ರ ಸಾಲಿನ ವರೆಗೆ ವ್ಯಾಸಂಗ ಮಾಡಿ **"ದ್ವಿಗುಣ ಅವಧಿ"** ಪೂರೈಸಿದ ವಿದ್ಯಾರ್ಥಿಗಳು ಮತ್ತೊಮ್ಮೆ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಮನವಿ ಮಾಡಿಕೊಂಡಿರುತ್ತಾರೆ. ಕಳೆದ ಬಾರಿ ದಿನಾಂಕ:02.09.2022ರ ಸಿಂಡಿಕೇಟ್ ಸಭೆಯಲ್ಲಿ ವಿಶೇಷ ಶುಲ್ಕ ರೂ.5000/– ಗಳನ್ನು ವಿಧಿಸಿ ಪರೀಕ್ಷೆ ಬರೆಯಲು ಅನುಮತಿಸಲಾಗಿತ್ತು. ಪ್ರತಿ ಸೆಮಿಸ್ಟರ್‌ಗೆ ದಂಡ ಶುಲ್ಕ 5000/– ಹಾಗೂ ಕಲಾ/ ವಿಜ್ಞಾನ/ ವಾಣಿಜ್ಯ ವಿಭಾಗದ ಪ್ರತಿ ಪತ್ರಿಕೆಯ ಶುಲ್ಕ 170/–, ಬಿ.ಬಿ.ಎಂ/ ಬಿ.ಸಿ.ಎ ಪ್ರತಿ ಪತ್ರಿಕೆಯ ಶುಲ್ಕ 200/–, ಬಿ.ಇಡಿ. ಪ್ರತಿ ಪತ್ರಿಕೆಯ ಶುಲ್ಕ 200/–, ಸ್ನಾತಕೋತ್ತರ ವಿಭಾಗದ ಪ್ರತಿ ಪತ್ರಿಕೆಯ ಶುಲ್ಕ 375/– ಇರುತ್ತದೆ.

ಆದಾಗ್ಯೂ ಹಲವು ವಿದ್ಯಾರ್ಥಿಗಳು ಪುನಃ ಪರೀಕ್ಷೆ ಬರೆಯಲು ಅವಕಾಶ ಕೋರಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಿ.ಇಡಿ./ ಸ್ನಾತಕ ಮತ್ತು ಸ್ನಾತಕೋತ್ತರ ಎಲ್ಲಾ ಪದವಿಯ ವಿದ್ಯಾರ್ಥಿಗಳಿಗೆ ಮುಂಬರುವ ದಿನಗಳಲ್ಲಿ – ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ – ಇಲ್ಲಿ ವಿಶೇಷ ಪರೀಕ್ಷೆ ನಡೆಸಲು ಅನುಮತಿಗಾಗಿ ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜು/ ವಿಭಾಗಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ 2009–10 ರಿಂದ 2016–17 ರವರೆಗೆ ವ್ಯಾಸಂಗ ಮಾಡಿ "ದ್ವಿಗುಣ ಅವಧಿ" ಪೂರೈಸಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಒಂದು ಬಾರಿಗೆ ಮಾತ್ರ 100 ವಿದ್ಯಾರ್ಥಿಗಳಿದ್ದಲ್ಲಿ ಪ್ರತಿ ಸೆಮಿಸ್ಟರ್‌ಗೆ ರೂ. 5,000/– ದಂಡ ಶುಲ್ಕದೊಂದಿಗೆ ಪರೀಕ್ಷೆಗೆ ಅವಕಾಶ ಕಲ್ಪಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(f)(07/23) |

–:ಟಿಪ್ಪಣಿ:–

**ವಿಷಯ: ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದ 03 ಆಧ್ಯಾದೇಶಗಳನ್ನು ಕೆಲವು ತಿದ್ದುಪಡಿಯೊಂದಿಗೆ ಮಾನ್ಯ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸುವ ಕುರಿತು.**

*****

ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ 03 ಆಧ್ಯಾದೇಶಗಳನ್ನು ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಮಾನ್ಯ ರಾಜ್ಯಪಾಲರಿಗೆ ಸಲ್ಲಿಸಲಾಗಿತ್ತು. ಆದರೆ, ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು ಸದರಿ ಆಧ್ಯಾಧೇಶಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಪುನಃ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಆಧ್ಯಾದೇಶಗಳನ್ನು ತಿದ್ದುಪಡಿ ಮಾಡಲಾಗಿದ್ದು, ದಿನಾಂಕ:16.06.2023ರ ವಿದ್ಯಾವಿಷಯಕ ಪರಿಷತ್ ಸಭೆ ಹಾಗೂ ದಿನಾಂಕ:17.06.2023ರ ಸಿಂಡಿಕೇಟ್ ಅಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು 2 ವಾರದೊಳಗಾಗಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರಿಗೆ ಸಲ್ಲಿಸಬೇಕಾಗಿತ್ತು. ಆದರೆ, ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಕಾರಣಗಳಿಂದ ಸದರಿ ಆಧ್ಯಾದೇಶಗಳನ್ನು ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರಿಗೆ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ, ಈಗ ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿವರಿಗೆ ಆಧ್ಯಾದೇಶಗಳನ್ನು ಸಲ್ಲಿಸಲು ದಿನಾಂಕ:31.07.2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

| ಕ್ರ.ಸಂ | ಆಧ್ಯಾಧೇಶಗಳು (ORDINANCES) |
|---|---|
| 01 | ORDINANCES GOVERNING THE ACTS OF PUNISHMENT FOR BREACH OF DUTIES, MISBEHAVIOUR AND INDISCIPLINE BY PERSONS INVOLVED IN UNIVERSITY EXAMINATION WORK. |
| 02 | ORDINANCES GOVERNING THE ACTS OF INDISCIPLINE AND MALPRACTICE IN DAVANGERE UNIVERSITY EXAMINATIONS. |
| 03 | ORDINANCES GOVERNING THE PROCEDURE FOR REVALUATION/ CHALLENGE VALUATION OF ANSWER BOOKS OF THE UNIVERSITY EXAMINATIONS. |

**ನಿರ್ಣಯ**

ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದ ಈ ಮೇಲ್ಕಂಡ 03 ಆಧ್ಯಾದೇಶಗಳನ್ನು ಕೆಲವು ತಿದ್ದುಪಡಿಯೊಂದಿಗೆ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(g)(07/23) |

## –:ಟಿಪ್ಪಣಿ:–

**ವಿಷಯ:** ಪರೀಕ್ಷಾಂಗ ವಿಭಾಗದ ಆಪ್ತಕಾರ್ಯಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಪ್ತ ಕಾರ್ಯದರ್ಶಿಗಳಿಗೆ ಮಾಹೆಯಾನ ಒಂದು ಸಾವಿರ ಹೆಚ್ಚಿಗೆ ಪಾವತಿಸುವ ಬಗ್ಗೆ.

*****

ಕುಲಸಚಿವರು, ಪರೀಕ್ಷಾಂಗ ವಿಭಾಗ, ದಾವಿವಿ – ಇವರು ತಮ್ಮ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಪ್ತ ಕಾರ್ಯದರ್ಶಿಗಳು – ಇವರು ಆಪ್ತ ಕಾರ್ಯಾಲಯ ಹಾಗೂ ಗೌಪ್ಯ ಕಾರ್ಯಗಳಲ್ಲಿ ಮತ್ತು ಕಛೇರಿ ಸಮಯಕ್ಕಿಂತ ಹೆಚ್ಚಿನ ಸಮಯ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿಯವರಿಗೆ ರೂ.1,000/– ಗಳನ್ನು ವೇತನದಲ್ಲಿ ಹೆಚ್ಚಿಸಲು ಕ್ರಮಗೊಳ್ಳುವಂತೆ ಕೋರಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಅನುಮೋದನೆಗೆ ಸಲ್ಲಿಸಲಾಗಿದೆ.

### ನಿರ್ಣಯ

ಕುಲಸಚಿವರು, ಪರೀಕ್ಷಾಂಗ ವಿಭಾಗದ ಆಪ್ತ ಕಾರ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಪ್ತ ಕಾರ್ಯದರ್ಶಿಗಳು ಇವರು ಗೌಪ್ಯ ಕಾರ್ಯಗಳಲ್ಲಿ ಮತ್ತು ಕಛೇರಿ ಸಮಯಕ್ಕಿಂತ ಹೆಚ್ಚಿನ ಸಮಯ ಕಾರ್ಯನಿರ್ವಹಿತ್ತಿರುವುದರಿಂದ ಸದರಿಯವರಿಗೆ ಮಾಹೆಯಾನ ಒಂದು ಸಾವಿರ ರೂಪಾಯಿ ಹೆಚ್ಚಿಗೆ ಪಾವತಿಸಲು ಸಭೆಯು ನಿರ್ಣಯಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(h)(07/23) |

## –:ಟಿಪ್ಪಣಿ:–

ವಿಷಯ: ಪರೀಕ್ಷಾಂಗ ವಿಭಾಗದ ವಿವಿಧ ಪದವಿಗಳ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆ ಮತ್ತು ಅನುಪಯುಕ್ತ ಪೇಪರ್‌ಗಳ ವಿಲೇವಾರಿ ಕುರಿತು.

*****

ಪರೀಕ್ಷಾಂಗ ವಿಭಾಗದ ವಿವಿಧ ಪದವಿಗಳ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆ ಪೇಪರ್‌ಗಳನ್ನು ಮೌಲ್ಯಮಾಪನಗೊಂಡ 03 ತಿಂಗಳುಗಳ ಕಾಲಾವಧಿಗೆ, ಮರು ಮೌಲ್ಯಮಾಪನ ಫಲಿತಾಂಶ ಪ್ರಕಟಗೊಂಡ ಅವಧಿ ಯಾವುದು ನಂತರ ಘಟಿಸುತ್ತದೆಯೋ ಅಲ್ಲಿಯವರೆಗೂ ಸಂರಕ್ಷಿಸಿ ಇದರ ಜೊತೆಗೆ ಅನುಪಯುಕ್ತ ಪೇಪರ್‌ಗಳನ್ನು ನಿಯಮಾನುಸಾರ ಯಶಸ್ವಿ ಟೆಂಡರ್‌ದಾರರಿಗೆ ವಿಲೇವಾರಿ ಮಾಡಲು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಅನುಮೋದನೆಗೆ ಸಲ್ಲಿಸಲಾಗಿದೆ.

### ನಿರ್ಣಯ

ಪರೀಕ್ಷಾಂಗ ವಿಭಾಗದ ವಿವಿಧ ಪದವಿಗಳ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆ ಪೇಪರ್‌ಗಳನ್ನು ಮೌಲ್ಯಮಾಪನಗೊಂಡ 03 ತಿಂಗಳುಗಳ ಕಾಲಾವಧಿಗೆ, ಮರು ಮೌಲ್ಯಮಾಪನ ಫಲಿತಾಂಶ ಪ್ರಕಟಗೊಂಡ ಅವಧಿ ಯಾವುದು ನಂತರ ಘಟಿಸುತ್ತದೆಯೋ ಅಲ್ಲಿಯವರೆಗೂ ಸಂರಕ್ಷಿಸಿ ಇದರ ಜೊತೆಗೆ ಅನುಪಯುಕ್ತ ಪೇಪರ್‌ಗಳನ್ನು ನಿಯಮಾನುಸಾರ ಯಶಸ್ವಿ ಟೆಂಡರ್‌ದಾರರಿಗೆ ವಿಲೇವಾರಿ ಮಾಡಲು ಸಭೆಯು ನಿರ್ಣಯಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(a)/(07/23) |

## -:ಟಿಪ್ಪಣಿ:-

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಪರಿಸರ ವಿಜ್ಞಾನ ವಿಭಾಗಕ್ಕೆ ಹೊಸ ವಿಜ್ಞಾನ ಕಟ್ಟಡದ ಮೊದಲನೇ ಮಹಡಿಯಲ್ಲಿ ಆಫೀಸ್ ಹಾಗೂ ಲ್ಯಾಬ್‌ಗೆ ಅಲ್ಯೂಮಿನಿಯಂ ಪಾರ್ಟಿಷನ್ (Aluminium Partition) ಮಾಡಿಸುವ ಕುರಿತು.**

*******

ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಪ್ರಯೋಗಾಲಯ ಕೈಗೊಳ್ಳಲು ಕಛೇರಿ ಕೊಠಡಿ ಮತ್ತು ಸಿಬ್ಬಂದಿಗೆ ಕೊಠಡಿ ಅವಶ್ಯಕತೆ ಇರುವುದರಿಂದ ಸಂಯೋಜನಾಧಿಕಾರಿಗಳು, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಇವರು ಹೊಸ ವಿಜ್ಞಾನ ಕಟ್ಟಡದ ಮೊದಲನೇ ಮಹಡಿಯಲ್ಲಿ ಆಫೀಸ್ ಹಾಗೂ ಲ್ಯಾಬ್‌ಗೆ ಅಲ್ಯೂಮಿನಿಯಂ ಪಾರ್ಟಿಷನ್ ಮಾಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ. ಆದ್ದರಿಂದ, ಈ ಸದರಿ ಕಾಮಗಾರಿಯನ್ನು Manual Tender/ ತುಂಡುಗುತ್ತಿಗೆ ಮುಂಖಾತರ ಕೈಗೊಳ್ಳುವ ಅವಶ್ಯಕತೆ ಇದ್ದು, ಅದರ ಅಂದಾಜು ಮೊತ್ತ ರೂ. 4.75 ಲಕ್ಷ ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಹೊಸ ವಿಜ್ಞಾನ ಕಟ್ಟಡದ ಮೊದಲನೇ ಮಹಡಿಯಲ್ಲಿ ಆಫೀಸ್ ಹಾಗೂ ಲ್ಯಾಬ್‌ಗೆ ಅಲ್ಯೂಮಿನಿಯಂ ಪಾರ್ಟಿಷನ್‌ನ್ನು Manual Tender/ ತುಂಡುಗುತ್ತಿಗೆ ಮುಂಖಾತರ ಮಾಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(b)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಬ್ರಹ್ಮಪುತ್ರ ಪುರುಷ ವಸತಿ ನಿಲಯಕ್ಕೆ ಹೊಸದಾಗಿ 500 LPH ಕುಡಿಯುವ ನೀರಿನ ಶುದ್ಧೀಕರಣ ಘಟಕ ಸ್ಥಾಪಿಸುವ ಕುರಿತು.**

*******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಮೂರು ಪುರುಷ ವಸತಿ ನಿಲಯಗಳಿಗೆ ಸೇರಿ ಕೇವಲ ಒಂದು 500 LPH ಸಾಮರ್ಥ್ಯದ ಕುಡಿಯುವ ನೀರಿನ ಶುದ್ಧೀಕರಣ ಘಟಕವಿದ್ದು, ಅದು ರಿಪೇರಿ ಬಂದಾಗ ಮೂರು ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದೆ. ಆದ್ದರಿಂದ, ಬ್ರಹ್ಮಪುತ್ರ ಪುರುಷ ವಸತಿ ನಿಲಯಕ್ಕೆ ಹೊಸದಾಗಿ 500 LPH ಸಾಮರ್ಥ್ಯದ ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು Manual Tender ಮುಖಾಂತರ ಕರೆದು ಕನಿಷ್ಠದರ ನಮೂದಿಸಿದ ಸಂಸ್ಥೆಯಿಂದ ಅಳವಡಿಸಿದ್ದು ಅದರ ಅಂದಾಜು ಮೊತ್ತ ರೂ. 4.94 ಲಕ್ಷಗಳನ್ನು ಪಾವತಿಸಲು ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಬ್ರಹ್ಮಪುತ್ರ ಪುರುಷ ವಸತಿ ನಿಲಯಕ್ಕೆ ಹೊಸದಾಗಿ 500 LPH ಸಾಮರ್ಥ್ಯದ ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು Manual Tender ಮುಖಾಂತರ ಕರೆದು, ಕನಿಷ್ಠದರ ನಮೂದಿಸಿದ ಎ.ಎಸ್.ಆರ್. ಎಂಟರ್ ಪ್ರೈಸಸ್ ಇವರಿಗೆ ರೂ. 4.94 ಲಕ್ಷಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಶಿವಗಂಗೋತ್ರಿ ಆವರಣದಲ್ಲಿರುವ 03 ಮಹಿಳಾ ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದ 02 ವಸತಿ ನಿಲಯಗಳಿಗೆ ಹೊಸದಾಗಿ ಕುಡಿಯುವ ನೀರಿನ ಶುದ್ಧೀಕರಣ ಘಟಕ ಸ್ಥಾಪಿಸಬೇಕಾಗಿದ್ದು, ಆರ್ಥಿಕ ಲಭ್ಯತೆಗನುಸಾರ ಖರೀದಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(c)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ಬ್ರಹ್ಮಪುತ್ರ ಹಾಗೂ ಕೃಷ್ಣ ಪುರುಷ ವಸತಿ ನಿಲಯಕ್ಕೆ ಮತ್ತು ತುಂಗಾ ಮಹಿಳಾ ವಸತಿ ನಿಲಯಕ್ಕೆ ಪ್ರತ್ಯೇಕವಾಗಿ ಹೊಸದಾಗಿ 02 ಬೋರ್‌ವೆಲ್‌ಗಳನ್ನು ಕೊರೆಸುವ ಕುರಿತು.**

*******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಬ್ರಹ್ಮಪುತ್ರ ಹಾಗೂ ಕೃಷ್ಣ ಪುರುಷ ವಸತಿ ನಿಲಯಕ್ಕೆ ಮತ್ತು ತುಂಗಾ ಮಹಿಳಾ ವಸತಿ ನಿಲಯಕ್ಕೆ ನೀರು ಸರಬರಾಜು ಮಾಡುವ ಬೋರ್‌ವೆಲ್‌ನಿಂದ ಕಲುಷಿತ ನೀರು ಬರುತ್ತಿರುವ ಕಾರಣ ಹೊಸದಾಗಿ 02 ಬೋರವೆಲ್‌ಗಳನ್ನು ಕೊರೆಸಿಕೊಡುವಂತೆ ವಸತಿ ನಿಲಯದ ನಿಲಯಪಾಲಕರು ಕೋರಿರುತ್ತಾರೆ. ಆದ್ದರಿಂದ, ತುಂಗಾ ಮಹಿಳಾ ವಸತಿ ನಿಲಯದ ಆವರಣದಲ್ಲಿ ಹಾಗೂ ಬ್ರಹ್ಮಪುತ್ರ ಪುರುಷ ವಸತಿ ನಿಲಯದ ಹಿಂಭಾಗದಲ್ಲಿ ಪ್ರತ್ಯೇಕವಾಗಿ ಹೊಸದಾಗಿ 02 ಬೋರವೆಲ್‌ಗಳನ್ನು ಕೊರೆಸುವ ಅವಶ್ಯಕತೆ ಇದ್ದು, ಅದರ ಅಂದಾಜು ಮೊತ್ತ **ರೂ. 4.30 ಲಕ್ಷ** ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಬ್ರಹ್ಮಪುತ್ರ ಹಾಗೂ ಕೃಷ್ಣ ಪುರುಷ ವಸತಿ ನಿಲಯಕ್ಕೆ ಮತ್ತು ತುಂಗಾ ಮಹಿಳಾ ವಸತಿ ನಿಲಯಕ್ಕೆ ನೀರು ಸರಬರಾಜು ಮಾಡುವ ಬೋರ್‌ವೆಲ್‌ನಿಂದ ಕಲುಷಿತ ನೀರು ಬರುತ್ತಿರುವ ಕಾರಣ ಹೊಸದಾಗಿ 02 ಬೋರವೆಲ್‌ಗಳನ್ನು ಕೊರೆಸಲು ತುಂಡು ಗುತ್ತಿಗೆ/ Manual Tender ಮುಖಾಂತರ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(d)/(07/23) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ಬ್ರಹ್ಮಪುತ್ರ ಮತ್ತು ಕೃಷ್ಣ ಪುರುಷ ವಸತಿ ನಿಲಯಕ್ಕೆ ನೀರು ಸರಬರಾಜು ಮಾಡುವ ಬೋರವೆಲ್ ಪೈಪ್‌ಲೈನ್ ಹಳೆಯ **PVC** ಪೈಪ್‌ದಾಗಿದ್ದು ಹೊಸದಾಗಿ **CPVC** ಪೈಪ್‌ಗಳನ್ನು ಖರೀದಿಸುವ ಕುರಿತು.

*******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಬ್ರಹ್ಮಪುತ್ರ ಹಾಗೂ ಕೃಷ್ಣ ಪುರುಷ ವಸತಿ ನಿಲಯಗಳಿಗೆ ನೀರು ಸರಬರಾಜು ಮಾಡುವ ಪೈಪ್‌ಲೈನ್‌ಗಳು ಹದಿನೈದು ವರ್ಷಗಳಷ್ಟು ಹಳೆಯದಾಗಿದ್ದು, PVC ಪೈಪ್‌ಲೈನ್ ಇರುತ್ತದೆ. ಇದರಿಂದಾಗಿ ಪ್ರತಿದಿನ ಪೈಪ್‌ಗಳು ಒಡೆಯುತ್ತಿದ್ದು ನಿರ್ವಹಣೆ ತುಂಬಾ ಕಷ್ಟವಾಗಿದ್ದು ಹೊಸದಾಗಿ CPVC ಪೈಪ್‌ಗಳನ್ನು ಖರೀದಿಸಿ ಅಳವಡಿಸಲು ಅವಶ್ಯಕತೆ ಇದ್ದು ಅದರ ಅಂದಾಜು ಮೊತ್ತ ರೂ. 4.90 ಲಕ್ಷ ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಬ್ರಹ್ಮಪುತ್ರ ಹಾಗೂ ಕೃಷ್ಣ ಪುರುಷ ವಸತಿ ನಿಲಯಕ್ಕೆ ನೀರು ಸರಬರಾಜು ಮಾಡುವ ಬೋರ್‌ವೆಲ್ ಪೈಪ್‌ಲೈನ್ ಹದಿನೈದು ವರ್ಷಗಳಷ್ಟು ಹಳೆಯದಾಗಿದ್ದು, ಪೈಪ್‌ಗಳು ಒಡೆಯುತ್ತಿದ್ದು ನಿರ್ವಹಣೆ ತುಂಬಾ ಕಷ್ಟವಾಗಿರುವುದರಿಂದ ಹೊಸದಾಗಿ CPVC ಪೈಪ್‌ಗಳನ್ನು Manual Tender ಮುಖಾಂತರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(e)/(07/23) |

## –:ಟಿಪ್ಪಣಿ:–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಹೊಸ ವಿಜ್ಞಾನ ಕಟ್ಟಡದ ಮೊದಲನೇ ಮಹಡಿಯ ಮೇಲೆ ಪರಿಸರ ವಿಜ್ಞಾನ ಮತ್ತು MCA ವಿಭಾಗಕ್ಕೆ Class Room ಗಳನ್ನು ನಿರ್ಮಾಣ ಮಾಡುವ ಕಾಮಗಾರಿ ಕುರಿತು.**

*******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಪರಿಸರ ವಿಜ್ಞಾನ ಹಾಗೂ MCA ವಿಭಾಗಗಳಿಗೆ Class Room ಗಳು ಅವಶ್ಯಕತೆ ಇರುವ ಹಿನ್ನಲೆಯಲ್ಲಿ ಹೊಸ ವಿಜ್ಞಾನ ಕಟ್ಟಡದ ಮೊದಲನೇ ಮಹಡಿಯ ಮೇಲೆ Class Room ಗಳನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದ್ದು ಅದರ ಅಂದಾಜು ಮೊತ್ತ **ರೂ. 60.00 ಲಕ್ಷ** ಆಗುತ್ತದೆ. ಸದರಿ ಕಾಮಗಾರಿಯನ್ನು ಸರ್ಕಾರಿ ಸಂಸ್ಥೆಯಾದ **ನಿರ್ಮಿತಿ ಕೇಂದ್ರ ದಾವಣಗೆರೆ ಇವರಿಗೆ ಮುಂಗಡ ಠೇವಣಿವಂತಿಗೆ ಆಧಾರದ ಮೇಲೆ** ಕೈಗೊಳ್ಳಲು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಪರಿಸರ ವಿಜ್ಞಾನ ಹಾಗೂ MCA ವಿಭಾಗಗಳಿಗೆ Class Room ಗಳು ಅವಶ್ಯಕತೆ ಇರುವ ಹಿನ್ನಲೆಯಲ್ಲಿ ಹೊಸ ವಿಜ್ಞಾನ ಕಟ್ಟಡದ ಮಹಡಿಯ ಮೇಲೆ ನಾಲ್ಕು Class Room ಗಳನ್ನು ನಿರ್ಮಾಣ ಮಾಡಲು ಅವಶ್ಯವಾಗಿರುವುದರಿಂದ ಸದರಿ ಕಾಮಗಾರಿಯನ್ನು ಸರ್ಕಾರಿ ಸಂಸ್ಥೆಯಾದ **ನಿರ್ಮಿತಿ ಕೇಂದ್ರ ದಾವಣಗೆರೆ ಇವರಿಗೆ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ** ಕೈಗೊಳ್ಳಲು ಸಭೆಯು ನಿರ್ಣಯಿಸಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(f)/(07/23) |

## -:ಟಿಪ್ಪಣಿ:-

**ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗಕ್ಕೆ LED Tube Light ಗಳನ್ನು ಖರೀದಿಸುವ ಕುರಿತು.**

*******

ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದಲ್ಲಿನ ವಿಜ್ಞಾನ ಕಟ್ಟಡ ಮತ್ತು ಕಲಾ ವಾಣಿಜ್ಯ ಕಟ್ಟಡಗಳಲ್ಲಿ ಹಳೆಯದಾದ CFL Tube Light ಗಳು ಸಂಪೂರ್ಣ ಹಾಳಾಗಿರುತ್ತವೆ. ಆದ್ದರಿಂದ, ಹೊಸದಾಗಿ LED Tube Light ಗಳನ್ನು ಖರೀದಿಸಿಕೊಡುವಂತೆ ಸಂಯೋಜನಾಧಿಕಾರಿಗಳು, ಚಿತ್ರದುರ್ಗ ಇವರು ಕೋರಿರುವ ಹಿನ್ನಲೆಯಲ್ಲಿ ಹೊಸದಾಗಿ LED Tube Light ಗಳನ್ನು ಖರೀದಿಸುವ ಅವಶ್ಯಕತೆ ಇದ್ದು, ಅದರ ಅಂದಾಜು ಮೊತ್ತ **ರೂ. 4.50 ಲಕ್ಷ** ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದಲ್ಲಿನ ವಿಜ್ಞಾನ ಕಟ್ಟಡ ಮತ್ತು ಕಲಾ ವಾಣಿಜ್ಯ ಕಟ್ಟಡಗಳಿಗೆ ಹಳೆಯದಾದ CFL Tube Light ಗಳು ಸಂಪೂರ್ಣ ಹಾಳಾಗಿರುವುದರಿಂದ, ವಸತಿ ನಿಲಯಗಳ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೊಸದಾಗಿ LED Tube Light ಗಳನ್ನು Manual Tender ಮುಖಾಂತರ ಖರೀದಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(g)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಪರೀಕ್ಷಾಂಗ ವಿಭಾಗದ 30 KVA Online UPS ಗೆ ಸಂಬಂಧಿಸಿದ 7ವರ್ಷ ಹಳೆಯದಾದ 30ಸಂಖ್ಯೆ Battery ಗಳನ್ನು Buy Back ನಲ್ಲಿ ಖರೀದಿಸುವ ಕುರಿತು.**

*******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಪರಿಕ್ಷಾಂಗ ವಿಭಾಗದಲ್ಲಿ 30KVA Online UPS & Battery ಗಳನ್ನು 2016ರಲ್ಲಿ ಅಳವಡಿಸಿದ್ದು, ಈಗ Battery ಗಳು 7 ವರ್ಷಗಳಷ್ಟು ಹಳೆಯದಾಗಿದ್ದು ಸಂಪೂರ್ಣ ಹಾಳಾಗಿರುತ್ತವೆ. ಆದ್ದರಿಂದ, 30 ಸಂಖ್ಯೆ Battery ಗಳನ್ನು ಹೊಸದಾಗಿ Buy Back ನಲ್ಲಿ ಖರೀದಿಸುವ ಅವಶ್ಯಕತೆ ಇದ್ದು ಅದರ ಅಂದಾಜು ಮೊತ್ತ **ರೂ. 4.75 ಲಕ್ಷ** ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಪರಿಕ್ಷಾಂಗ ವಿಭಾಗದಲ್ಲಿ 30KVA Online UPS & Battery ಗಳನ್ನು 2016ರಲ್ಲಿ ಅಳವಡಿಸಿದ್ದು, ಈಗ Battery ಗಳು 7 ವರ್ಷಗಳಷ್ಟು ಹಳೆಯದಾಗಿರುವುದರಿಂದ 30 ಸಂಖ್ಯೆ Battery ಗಳನ್ನು ಹೊಸದಾಗಿ Buy Back ನಲ್ಲಿ Manual Tender ಮುಖಾಂತರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(h)/(07/23) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗಕ್ಕೆ **Platform** ಮತ್ತು ಮ್ಯೂಸಿಯಂ **(Museum)** ಮಾಡಲು ಪಾರ್ಟಿಷನ್ ಮಾಡುವ ಕುರಿತು.

*******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಎಸ್.ಎಸ್. ಅಡಿಟೋರಿಯಂ ಮೇಲ್ಭಾಗದಲ್ಲಿ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಮ್ಯೂಸಿಯಂ **(Museum)** ಗೆ **Platform** ಕಟ್ಟಿಸಿಕೊಡಲು ಮತ್ತು Museum ಗೆ ಸಂಬಂಧಿಸಿದ ಸಾಮಾಗ್ರಿಗಳನ್ನು ಇಡಲು ಪಾರ್ಟಿಷನ್ ಮಾಡಿಸಿಕೊಡುವಂತೆ ಸದರಿ ವಿಭಾಗದ ಸಂಯೋಜನಾಧಿಕಾರಿಗಳು ಕೋರಿರುತ್ತಾರೆ. ಆದ್ದರಿಂದ, ಸದರಿ ಕಾಮಗಾರಿಯನ್ನು ನಿರ್ವಹಿಸುವ ಅವಶ್ಯಕತೆ ಇದ್ದು ಇದರ ಅಂದಾಜು ಮೊತ್ತ ರೂ. 4.80 ಲಕ್ಷ ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಮ್ಯೂಸಿಯಂ **(Museum)** ಗೆ **Platform** ಕಟ್ಟಿಸಿಕೊಡಲು ಮತ್ತು Museum ಗೆ ಸಂಬಂಧಿಸಿದ ಸಾಮಾಗ್ರಿಗಳನ್ನು ಇಡಲು ಪಾರ್ಟಿಷನ್‌ನ್ನು ತುಂಡುಗುತ್ತಿಗೆ ಮುಖಾಂತರ ಮಾಡಿಸಲು ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಸಾರವಾಗಿ ಕಾಮಗಾರಿ ಕೈಗೊಳ್ಳಲು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು　　　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(i)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದಲ್ಲಿ R.O. Water Pufifier Machine ಗಳ ವಾರ್ಷಿಕ ನಿರ್ವಹಣೆ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಆವರಣ, ಪಿ.ಜಿ. ಸೆಂಟರ್ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿರುವ **R.O. Water Pufifier Machine** ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು AMC ನೀಡುವ ಕುರಿತು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ ಆವರಣ, ಪಿ.ಜಿ. ಸೆಂಟರ್ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿರುವ **R.O. Water Pufifier Machine** ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು ದರಪಟ್ಟಿ/ Manual Tender ಮುಂಖಾತರ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(j)/(07/23) |

## –:ಟಿಪ್ಪಣಿ:–

**ವಿಷಯಃ ವಿಶ್ವವಿದ್ಯಾನಿಲಯದಲ್ಲಿರುವ CCTV ಗಳನ್ನು ವಾರ್ಷಿಕ ನಿರ್ವಹಣೆ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣ, ಪಿ.ಜಿ. ಸೆಂಟರ್ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿರುವ CCTV ಗಳನ್ನು ವಾರ್ಷಿಕ ನಿರ್ವಹಣೆ (AMC) ನೀಡುವುದಕ್ಕೆ ದರ ಒಪ್ಪಂದ ಮಾಡಿಕೊಳ್ಳಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಆವರಣ, ಪಿ.ಜಿ. ಸೆಂಟರ್ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿರುವ CCTV ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು ದರಪಟ್ಟಿ/ Manual Tender ಮುಂಖಾತರ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                                            ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(k)/(07/23) |

# –:ಟಿಪ್ಪಣಿ:–

**ವಿಷಯ: UPS ಗಳನ್ನು ವಾರ್ಷಿಕ ನಿರ್ವಹಣೆ ಮಾಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣ, ಪಿ.ಜಿ. ಸೆಂಟರ್ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿರುವ UPS ಗಳನ್ನು ವಾರ್ಷಿಕ ನಿರ್ವಹಣೆ (AMC) ನೀಡುವುದಕ್ಕೆ ದರ ಒಪ್ಪಂದ ಮಾಡಿಕೊಳ್ಳಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಆವರಣದಲ್ಲಿನ ಆಡಳಿತ ಭವನದ ಹಾಗೂ ಇನ್ನಿತರ ವಿಭಾಗಗಳಲ್ಲಿರುವ ಎಲ್ಲಾ UPS ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು ದರಪಟ್ಟಿ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(1)/(07/23) |

## –ಃಟಿಪ್ಪಣಿಃ–

ವಿಷಯಃ **Wi-Fi Network ನ್ನು ವಾರ್ಷಿಕ ನಿರ್ವಹಣೆ ಮಾಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:20.07.2023.

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣ, ಪಿ.ಜಿ. ಸೆಂಟರ್ ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯದಲ್ಲಿರುವ Wi-Fi Network ನ್ನು ವಾರ್ಷಿಕ ನಿರ್ವಹಣೆ (AMC) ನೀಡುವುದಕ್ಕೆ ದರ ಒಪ್ಪಂದ ಮಾಡಿಕೊಳ್ಳಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಆವರಣ, ಪಿ.ಜಿ. ಸೆಂಟರ್ ಚಿತ್ರದುರ್ಗ, ದೃಶ್ಯಕಲಾ ಮಹಾವಿದ್ಯಾಲಯ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿರುವ Wi-Fi Network ನ್ನು ವಾರ್ಷಿಕ ನಿರ್ವಹಣೆ ಮಾಡಲು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(m)/(07/23) |

## –:ಟಿಪ್ಪಣಿ:–

ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್ **(Aluminium Partition)** ಮಾಡಿಸುವ ಕುರಿತು.

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪಾರ್ಟಿಷನ್ ಮಾಡಿಸಿಕೊಡುವಂತೆ ಸದರಿ ವಿಭಾಗದ ಅಧ್ಯಕ್ಷರು ಕೋರಿರುತ್ತಾರೆ. ಆದ್ದರಿಂದ, ಸದರಿ ಕಾಮಗಾರಿಯನ್ನು ನಿರ್ವಹಿಸುವ ಅವಶ್ಯಕತೆ ಇದ್ದು ಇದರ ಅಂದಾಜು ಮೊತ್ತ ರೂ. 4.00 ಲಕ್ಷ ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್‌ನ್ನು Manual Tender/ ತುಂಡುಗುತ್ತಿಗೆ ಮುಂಖಾತರ ಮಾಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(n)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್ (Aluminium Partition) ಮಾಡಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಪಾರ್ಟಿಷನ್ ಮಾಡಿಸಿಕೊಡುವಂತೆ ಸದರಿ ವಿಭಾಗದ ಅಧ್ಯಕ್ಷರು ಕೋರಿರುತ್ತಾರೆ. ಆದ್ದರಿಂದ, ಸದರಿ ಕಾಮಗಾರಿಯನ್ನು ನಿರ್ವಹಿಸುವ ಅವಶ್ಯಕತೆ ಇದ್ದು ಇದರ ಅಂದಾಜು ಮೊತ್ತ ರೂ. 1.00 ಲಕ್ಷ ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್‌ನ್ನು ತುಂಡುಗುತ್ತಿಗೆ/ Manual Tender ಮುಂಖಾತರ ಮಾಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(ಂ)/(07/23) |

## –:ಟಿಪ್ಪಣಿ:–

ವಿಷಯಃ **Lift ಗಳನ್ನು ನಿರ್ವಹಣೆ ಮಾಡಲು AMC ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಆಡಳಿತ ಭವನದಲ್ಲಿ 01 ಹಾಗೂ ಜ್ಞಾನಸೌಧ ಕಟ್ಟಡದ ಗ್ರಂಥಾಲಯದ 01 **ಒಟ್ಟು 02 Lift** ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು AMC ನೀಡುವುದಕ್ಕೆ ದರ ಒಪ್ಪಂದ ಮಾಡಿಕೊಳ್ಳಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಆಡಳಿತ ಭವನದಲ್ಲಿ 01 ಹಾಗೂ ಜ್ಞಾನಸೌಧ ಕಟ್ಟಡದ ಗ್ರಂಥಾಲಯದ 01 **ಒಟ್ಟು 02 Lift ಗಳನ್ನು** ವಾರ್ಷಿಕ ನಿರ್ವಹಣೆ ಮಾಡಲು ದರಪಟ್ಟಿ/ Manual Tender ಮುಂಖಾತರ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(p)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ವಾರ್ಷಿಕ ನಿರ್ವಹಣೆ ಮಾಡಲು AMC ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲವನ್ನು(Website) ವಾರ್ಷಿಕ ನಿರ್ವಹಣೆ ಮಾಡಲು AMC ನೀಡುವುದಕ್ಕೆ ದರ ಒಪ್ಪಂದ ಮಾಡಿಕೊಳ್ಳಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

## <u>ನಿರ್ಣಯ</u>

ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್ಜಾಲವನ್ನು(Website) ವಾರ್ಷಿಕ ನಿರ್ವಹಣೆ ಮಾಡಲು ದರಪಟ್ಟಿ / Manual Tender ಮುಂಖಾತರ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(q)/(07/23) |

# –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಪ್ರಿಂಟರ್‌ಗಳನ್ನು ವಾರ್ಷಿಕ ನಿರ್ವಹಣೆ ಮಾಡಲು AMC ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿರುವ ಜೆರಾಕ್ಸ್ ಯಂತ್ರಗಳು ಡಾಟ್ ಮೆಟ್ರಿಕ್ ಲಿಪಿ (5) ಪ್ರಿಂಟರ್‌ಗಳನ್ನು ಅಧಿಕೃತ ಮಾರಾಟ ಸಂಸ್ಥೆಯವರಿಂದ ವಾರ್ಷಿಕ ನಿರ್ವಹಣೆ ಮಾಡುವುದಕ್ಕೆ ದರ ಒಪ್ಪಂದ ಮಾಡಿಕೊಳ್ಳಲು ದಿನಾಂಕ:31.07.2023 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

## <u>ನಿರ್ಣಯ</u>

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿರುವ ಜೆರಾಕ್ಸ್ ಯಂತ್ರಗಳು ಡಾಟ್ ಮೆಟ್ರಿಕ್ ಲಿಪಿ (5) ಪ್ರಿಂಟರ್‌ಗಳನ್ನು ಅಧಿಕೃತ ಮಾರಾಟ ಸಂಸ್ಥೆಯವರಿಂದ ವಾರ್ಷಿಕ ನಿರ್ವಹಣೆ ಮಾಡಲು ದರಪಟ್ಟಿ/ Manual Tender ಮುಖಾಂತರ ಕರೆದು AMC ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(r)/(07/23) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್ (Aluminium Partition) ಮಾಡಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪಾರ್ಟಿಷನ್ ಮಾಡಿಸಿಕೊಡುವಂತೆ ಸದರಿ ವಿಭಾಗದ ಅಧ್ಯಕ್ಷರು ಕೋರಿರುತ್ತಾರೆ. ಆದ್ದರಿಂದ, ಸದರಿ ಕಾಮಗಾರಿಯನ್ನು ನಿರ್ವಹಿಸುವ ಅವಶ್ಯಕತೆ ಇದ್ದು ಇದರ ಅಂದಾಜು ಮೊತ್ತ ರೂ. 5.00 ಲಕ್ಷ ಆಗುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಲ್ಯೂಮಿನಿಯಂ ಪಾರ್ಟಿಷನ್‌ನ್ನು Manual Tender/ ತುಂಡುಗುತ್ತಿಗೆ ಮುಂಖಾತರ ಮಾಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ. ಘಟಕ | |
|---|---|
| ವಿಷಯ ಸಂಖ್ಯೆ: | ಸಿಂ.07(a)/(07/23) |

## -:ಟಿಪ್ಪಣಿ:-

ವಿಷಯ: **2022-23ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಅನುಮೋದಿಸುವ ಕುರಿತು.**

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಸರ್ಕಾರಕ್ಕೆ ಸಲ್ಲಿಸಲು ಕರಡು ವರದಿಯನ್ನು ಸಿದ್ದಪಡಿಸಲಾಗಿದ್ದು, ಸದರಿ ವರದಿಯನ್ನು ದಿನಾಂಕ:31.07.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ವಾರ್ಷಿಕ ವರದಿಯನ್ನು (Annual Report) ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು